## ಕರ್ನಾಟಕ ಸರಕಾರ

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು

# ಪ್ರಥಮ ಭಾಷೆ ಸಿರಿ ಕನ್ನಡ

**ಪ್ರೋತ್ಸಾಹಿತ ಮಕ್ಕಳಿಕಾಗಿ**

**ಎಸ್. ಎಸ್.ಎಲ್.ಸಿ ವಿದ್ಯಾರ್ಥಿಗಳ**




**ಕ್ರೈಸ್ ಸಿರಿ ಕನ್ನಡ ಸಂಪನ್ಮೂಲ ತಂಡ**

# ಸಂಪನ್ಮೂಲ ರಚನಾ ತಂಡ

| | |
|---|---|
| ಶ್ರೀ ಶಂಕರಗೌಡ ಬ ಗಂಗನಗೌಡ್ರ | ಕಿ. ರಾ.ಚೆ.ವ.ಶಾಲೆ ಬ್ಯಾಡಗಿ |
| ಶ್ರೀಮತಿ ಶಿವಮ್ಮ ಜಿ | ಮೋ.ದೇ.ವ.ಶಾಲೆ ಹಾಲಭಾವಿ |
| ಶ್ರೀಮತಿ ಯಶೋಧ ಗಾರ್ಗಿ | ಕಿ. ರಾ.ಚೆ.ವ.ಶಾಲೆ ಗಜೇಂದ್ರಗಡ |
| ಶ್ರೀ ಸತೀಶ ಜಮಾದರ | ಮೋ.ದೇ.ವ.ಶಾಲೆ ಕೊಗನೂರು |
| ಶ್ರೀಮತಿ ವಸಂತಲಕ್ಷ್ಮೀ | ಕಿ. ರಾ.ಚೆ.ವ.ಶಾಲೆ ಭುವನಹಳ್ಳಿ |

| ಕ್ರಮ ಸಂಖ್ಯೆ | ಪ್ರಶ್ನೆಯ ವಿಧಗಳು | ನಿಗದಿತ ಅಂಕ | ಪಡೆಯ ಬಹುದಾದ ಅಂಕಗಳು |
|---|---|---|---|
| 1 | ಒಂದು ವಾಕ್ಯದ ಪ್ರಶ್ನೆಗಳು | 7 | 4 |
| 2 | ಮೂರು ನಾಲ್ಕು ವಾಕ್ಯದ ಪ್ರಶ್ನೆಗಳು | 20 | 8 |
| 3 | ಲೇಖಕರು / ಕವಿಗಳ ಪರಿಚಯ | 6 | 6 |
| 4 | ಸಂದರ್ಭದ ಪ್ರಶ್ನೆಗಳು | 18 | 6 |
| 5 | ಕಂಠಪಾಠ ಪದ್ಯ ಪೂರ್ಣಗೊಳಿಸುವುದು | 4 | 4 |
| 6 | ಪದ್ಯದ ಸಾರಾಂಶ ಬರೆಯುವುದು | 4 | 3 |
| 7 | ಛಂದಸ್ಸು & ಅಲಂಕಾರ | 6 | 2 |
| 8 | ಗಾದೆ ಮಾತುಗಳು | 3 | 2 |
| 9 | ಪತ್ರ ಬರವಣಿಗೆ | 5 | 3 |
| 10 | ಪ್ರಬಂಧ | 5 | 2 |
| 11 | ಅಪಠಿತ ಗದ್ಯ | 4 | 4 |
| 12 | ಗದ್ಯದ ಮುಖ್ಯಾಂಶಗಳು, ವ್ಯಾಕರಣಾಂಶಗಳು | 10 | 4 |

## ಗದ್ಯ–೦೧
## ಯುದ್ಧ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ರಾಹಿಲನು ಯಾರು?**
   ರಾಹಿಲನು ಸೈನ್ಯದಲ್ಲಿ ಇದ್ದ ಒಬ್ಬ ಡಾಕ್ಟರ್
2. **ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?**
   ರಾಹಿಲನು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡನು.
3. **ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**
   ಗಡಿ ಪ್ರದೇಶಗಳಲ್ಲಿ, ರಾತ್ರಿ ವೇಳೆ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.
4. **ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?**
   ರಾಹಿಲನು "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲಾ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.
5. **ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು?**
   "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ" ಎಂಬುದು ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವಾಗಿದೆ.

**II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. **ಡಾಕ್ಟರ್‌ಗೆ ವಿಮಾನದ ಪೈಲೆಟ್ ಏನು ಹೇಳಿದನು?**
   "ಡಾಕ್ಟರ್ ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೇ ಈ ಕತ್ತಲೆಯಲ್ಲಿ ಏನೂ ಕಾಣಿಸುತ್ತಿಲ್ಲವಲ್ಲಾ?" ಎಂದು ವಿಮಾನದ ಪೈಲಟ್ ನುಡಿದನು.
2. **ಮಹಿಳೆಯರ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಳಾವುವು?**

   ಮಹಿಳೆಯ ಅರ್ತನಾದ ಕೇಳಿ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮ ವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆ ಹಾಯುತ್ತಿರಲಿಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸುತ್ತಿದೆ ಎಂಥಹ ಈ ಸಮಯದಲ್ಲಿ ಆ ಮನೆಯಾಳಗೆ ಯಾವ ರೀತಿಯ ಕಾರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು.
3. **ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**
   "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು, ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ ಯುದ್ಧ!" ತಿರಸ್ಕಾರದಿಂದ ನುಡಿದಳು ಮುದುಕಿ.
4. **3. ಮುದುಕಿಯು ನಿರ್ಜೀವವಾಗಿರುವ ಮಗುವನ್ನು ನೋಡಿ ನಿರಾಶೆಯಿಂದ ಹೇಳಿದ್ದೇನು?**
   ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲಾ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯೊ? ಎಂದು ನಿರಾಶೆಯಿಂದ ಹೇಳಿದಳು.

# ಗದ್ಯ-೦೨
# ಶಬರಿ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ಶ್ರೀ ರಾಮನ ತಂದೆಯ ಹೆಸರೇನು?**

ಉ. ಶ್ರೀರಾಮನ ತಂದೆ ಹೆಸರು ದಶರಥ ಮಹಾರಾಜ.

2. **ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದಳು? (2020 ಪೂ.ಪಿ.ಪ)**

ಉ. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಹೂ, ಹಣ್ಣು, ತಳಿರು, ಲತೆ ,ಮಧುಪರ್ಕವನ್ನು ಸಂಗ್ರಹಿಸಿದಳು.

3. **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು? (2019 ಏಪ್ರಿಲ್)**

ಉ. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

4. **ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?(2018,2017 ಏಪ್ರಿಲ್)**

ಉ. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು ಮಹರ್ಷಿ.

5. **'ಶಬರಿ' ಗೀತನಾಟಕದ ಕರ್ತೃ ಯಾರು?**

ಉ. ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್‌ವರು ಶಬರಿ ಗೀತ ನಾಟಕದ ಕರ್ತೃ.

# ಗದ್ಯ-೦೩
# ಲಂಡನ್ ನಗರ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ಲಂಡನ್ನಿನ ರಸ್ತೆಗಳಲ್ಲಿ ಜನರು ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆ ಏನು?**

   ಲಂಡನ್ನಿನ ರಸ್ತೆಗಳಲ್ಲಿ ಜನರು ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಯನ್ನು ಒಯ್ದಿದ್ದಾರೆ.

2. **ನೆಲ್‌ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರೇನು?**

   ನೆಲ್‌ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್.

3. **ವೆಸ್ಟ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ?**

   ಸತ್ತವರ ಸ್ಮಾರಕ.

4. **ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?**

   ಆಂಗ್ಲರ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಲಂಡನ್ ನಗರದ ಚೇರಿಂಗ್ ಕ್ರಾಸ್.

## ಕೊಟ್ಟಿರುವ ಪ್ರಶ್ನಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ

1. **ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**

   ಲಂಡನ್ ನಗರದಲ್ಲಿನ ವೂಲವರ್ಥ ಎಂಬ ಸ್ಟೇಶನರಿ ಅಂಗಡಿಯಲ್ಲಿ ಎಲ್ಲ ತರಹದ ಸಾಮಾನುಗಳು ದೊರೆಯುತ್ತವೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ ಇಲೆಕ್ಟ್ರಿಕ್ ದೀಪದ ಸಾಮಾನುಗಳು, ಫೋಟೊ, ಅಡವಿಯ ಹೂವು, ಯುದ್ಧ ಸಾಮಾಗ್ರಿಗಳೆಲ್ಲವು ಇಲ್ಲಿ ದೊರೆಯುತ್ತವೆ.

**2.ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**

ಲಂಡನ್ನಿನ ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ ಉಪಹಾರ ಗೃಹಗಳಲ್ಲಿ ಇಲ್ಲಿ ಮಾಣಿಗಳಿಲ್ಲ ಬೆಂಗಳೂರಿನ ಮಾತಿನಲ್ಲಿ ಹೇಳುವುದಾದರೆ ಅಮ್ಮಣ್ಣಿಗಳಿರುತ್ತಾರೆ ಯಾವುದಾದರೊಂದು ದೊಡ್ಡ ಅಂಗಡಿಗೆ

ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ಒಬ್ಬ ಹೆಣ್ಣು ಮಗಳು ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು ಮಕ್ಕಳೆ ಕಾಲೇಜಿನಲ್ಲಿಯೂ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ನಿಯುಕ್ತಿಗೊಳಿಸಿರುತ್ತಾರೆ.

**3.ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**

ಲೇಖಕರು ಲಂಡನ್ ನಗರದಲ್ಲಿ ಹೆಣ್ಣು ಮಕ್ಕಳು ಧರಿಸು ಟೊಪ್ಪಿಗೆಯನ್ನು ಬಹು ಕುತೂಹಲದಿಂದ ನೋಡುತ್ತಾರೆ ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ ಸಿಕ್ಕಿಸಿದ ಪುಚ್ಚವಾದರೂ ಕನಿಷ್ಟ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾಂತರ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ. ಮನುಷ್ಯರಂತೆ ಟೊಪ್ಪಿಗೆಯಲ್ಲವೆ ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂಬುವುದು ಲೇಖಕರ ಅಭಿಪ್ರಾಯವಾಗಿದೆ.

**4.ಪೊಯಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾದಿಗಳಿವೆ?**

ಲಂಡನ್ ನಗರದ ಪೊಯಟ್ ಕಾರ್ನರ್‌ನಲ್ಲಿ ಪ್ರಸಿದ್ಧ ಲೇಖಕ ಕಿಂಪ್ಲಿನ್, ಹಾರ್ಡಿ, ಮೆಕಾಲೆ, ಜಾನ್ಸ್, ಗೋಲ್ಡ್ ಸ್ಮಿತ್, ವಿಮರ್ಶಕ ಮತ್ತು ಭಾಷಾಂತರಕಾರ ಡ್ರಾಯ್‌ಡನ್ ಪ್ರಖ್ಯಾತ ನಾಟಕಕಾರ ಬೆನ್ ಜಾನ್ಸನ್ ಹಾಗೂ ಬ್ರಿಟನ್ನಿನ ಮಹೋನ್ನತ ರಾಷ್ಟ್ರಕವಿ ವರ್ಡ್ಸ್‌ವರ್ತ್ ಮೊದಲಾದ ಕವಿ ಪುಂಗವರ ಸಮಾಧಿಗಳಿವೆ

**5.ಸಾಮ್ರಾಟರ ರಾಜ್ಯಾಭಿಷೇಕವಾಗುವ ಕಲ್ಲು ಪಾಟಿಯ ಸಿಂಹಾಸನದ ಮೇಲಿರುವ ಕಲ್ಲಿನ ವಿಶೇಷತೆ ಏನು?**

ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಸಿಂಹಾಸನದ ಮೇಲೆ ಒಂದು ಕಲ್ಲು ಪಾಟಿಯನ್ನು ಹಾಕುತ್ತಾರೆ ಸಾಮ್ರಾಟರು ಇದರ ಮೇಲೆ ಕೂರಬೇಕು **'ಸ್ಟೋನ್ ಆಫ್ ಸ್ಕೋನ್'** ಎಂದು ಇದರ ಹೆಸರು ಎರಡನೇ ಎಡ್ವರ್ಡನು ಸ್ಕಾಟ್ ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ನಡೆಯುತ್ತದೆ ಅದರಲ್ಲಿ ಯಾವ ಸಿದ್ಧಿ ಇದೆಯೋ ಯಾವ ಮಂತ್ರವಿದೆಯೊ ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಅದರಲ್ಲಿ ಇರಬೇಕೆನಿಸುತ್ತದೆ.

## ಗದ್ಯ– ೦೪
## ಭಾಗ್ಯಶಿಲ್ಪಿಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದ ಪ್ರಶ್ನೆಗಳು**

**1. ನಾಲ್ವಡಿ ಕೃಷ್ಣರಾಜ ಒಡೆಯರ್ ಯಾವಾಗ ಪಟ್ಟಾಭಿಷಕ್ತರಾದರು?**

ಉ: ನಾಲ್ವಡಿ ಕೃಷ್ಣರಾಜ ಒಡೆಯರ್ 1895ರಲ್ಲಿ ಪಟ್ಟಾಭಿಷಕ್ತರಾದರು.

2. **ನಾಲ್ವಡಿ ಕೃಷ್ಣರಾಜ ಒಡೆಯರ್ ಯಾವುದಕ್ಕಾಗಿ ಕಂಕಣ ಬದ್ಧರಾದರು?**

**ಉ:** ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು.

3. **ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?**

**ಉ:** ಶಿವನಸಮುದ್ರದ ಜಲವಿದ್ಯುತ್ ಯೋಜನೆ ಏಷಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಯೋಜನೆಯಾಗಿದೆ.

4. **ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

**ಉ:** ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯಅವರಿಗೆ ಸರ್ ಪದವಿಯನ್ನು ನೀಡಿ ಗೌರವಿಸಿತು.

5. **ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

6. **ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**

**ಉ:** ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಎಂಜಿನಿಯರ್ ದಿನಾಚರಣೆಯನ್ನು ಮಾಡಲಾಗುತ್ತಿದೆ.

## ಗದ್ಯ ಪಾಠ – ೫.
## ಎದೆಗೆ ಬಿದ್ದ ಅಕ್ಷರ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1. **ಇಂದಲ್ಲ – ನಾಳೆ ಫಲ ಕೊಡುವ ಅಂಶಗಳಾವುವು?**

   ಉ: ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.
2. **ಮನೆ ಮಂಚಮ್ಮ ಯಾರು?**

   ಉ: ಮನೆ ಮಂಚಮ್ಮ ಗ್ರಾಮದೇವತೆ
3. **ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?**

   ಉ: ಮನೆ ಮಂಚಮ್ಮನ ಕತೆ ಹೇಳಿದ ಕವಿ ಸಿದ್ದಲಿಂಗಯ್ಯ
4. **ಶಿವಾನುಭವ ಶಬ್ದ ಕೋಶ ಪುಸ್ತಕ ಬರೆದವರು ಯಾರು?**

   ಉ: ಶಿವಾನುಭವ ಶಬ್ಧಕೋಶ ಪುಸ್ತಕ ಬರೆದವರು ಹಳಕಟ್ಟಿ ಯವರು
5. **ವಚನಕಾರರರಿಗೆ ಯಾವುದು ದೇವರಾಗಿತ್ತು?**

   ಉ: ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು
6. **ಅಶೋಕ ಪೈ ಅವರ ವೃತ್ತಿ ಯಾವುದು?**

   ಉ: ಅಶೋಕಪೈರವರ ವೃತ್ತಿ ಮನೋವೈದ್ಯರು
7. **ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿ?**

   ಉ: ಭಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ ಎಂದು ದೇವನೂರರು ಸ್ಪಷ್ಟೀಕರಿಸಿದ್ದಾರೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ**

೧. **ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?**

ಉ: ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನೆಂದರೆ ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾರೆ, ಇನ್ನೊಂದಷ್ಟು ಜನ ಇದರ ಅರಿವಿಲ್ಲದೇ ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆಯಾಡುತ್ತಾ ತಮ್ಮಷ್ಟಕ್ಕೆ ತಾವು ಇರುತ್ತಾರೆ, ಆಗ ಟೆಲಿವಿಷನ್‌ನಲ್ಲಿ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದು:ಖದ ಭಾವನೆಯು ಇದನ್ನು ನೋಡದೇ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪ ಮಟ್ಟಿಗೆ ದುಗುಡಗೊಳ್ಳತ್ತದೆ, ಅದೇ ಟೆಲಿವಿಷನ್ ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರಲ್ಲಿ ಖುಷಿ ಭಾವನೆಯು ಉಂಟಾಗುತ್ತದೆ. ಇದು ಪಕ್ಕದ ಕೊಠಡಿಯಲ್ಲಿ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸಂತೋಷದ ಭಾವನೆ ಉಂಟಾಗುತ್ತದೆ. ಈ ಸಂಶೋಧನಾ ಸತ್ಯವೇನೆಂದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಒಂದು ಜೀವಿಗೆ ಆಗುವ ದು:ಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಇರುವ ಎಲ್ಲಾ ಜೀವಿಗಳಲ್ಲಿ ಕಂಪನ ಉಂಟುಮಾಡುತ್ತದೆ. ಈ ಕಂಪನ ಇಡೀ ಜೀವಸಂಕುಲವೆಲ್ಲಾ ಒಂದೇ ಎಂದು ಹೇಳುತ್ತದೆ.

೨. **ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು?**

ಉ: ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ. ಜ್ಞಾನ ಮಾತ್ರ ಅಲ್ಲ, ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ, ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ.ಅದು ತರ್ಕವಲ್ಲ, ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಿದ್ದಾರೆ.

## ಗದ್ಯ ಪಾಠ – ೦೬
## ವ್ಯಾಘ್ರಗೀತೆ

**ಒಂದು ವಾಕ್ಯದಲ್ಲಿ ಉತ್ತರಿಸಿ**

1. **ಭಗವದ್ಗೀತೆಯನ್ನು ರಚಿಸಿದವರು ಯಾರು?**

   ಉ: ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು

2. **ಹುಲಿಗೆ ಪರಮಾನಂದವಾಗಲು ಕಾರಣವೇನು?**

   ಉ: ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

3. **ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**

   ಉ: ಹುಲಿಗೆ ತಮ್ಮ ಮುಖ ದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರ ತಲೆ ಸುತ್ತಲಾರಂಭಿಸಿತು.

4. **ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**

   ಉ: ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ

5. **ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**

   ಉ: ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಹಸಿದು ಮಲಗಿದ್ದ ಹುಲಿಯು ಯೋಚಿಸಿತು.

**ಕೊಟ್ಟಿರುವ ಪ್ರಶ್ನೆಗಳಿಗೆ ೨–೩ ವಾಕ್ಯಗಳಲ್ಲಿ ಉತ್ತರಿಸಿ**

೧. **ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?**

ಉ: ಭರತಖಂಡದ ಹುಲಿಗಳು ಧರ್ಮ ಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ.ಯಾವ ನಾಡಿನಲ್ಲಿ ಶ್ರೀ ರಾಮನಂತಹ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗವದ್ಗೀತೆಯಂತ ಗ್ರಂಥ ಉದ್ಭವಿಸಿತೋ ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಶತೃಗಳನ್ನಾದರೂ ಸರಿಯೇ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ.

೨. **ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ?**

ಉ: ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು, ಚಿಕ್ಕನಾಯಕನಹಳ್ಳಿಗೆ ತೆಂಗಿನ ಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂತಿರುಗಿ ಬರುತ್ತಿದ್ದರು, ಶಾನುಭೋಗರು ಬಿದ್ದಸ್ಥಳಕ್ಕೆ ಕಾಲುದಾರಿ ಇದೆ ಎನ್ನುವಾಗ ಹುಲಿಯು ಘರ್ಜನೆ ಕೇಳಿಸಿತು, ಎತ್ತುಗಳು ಕಣಿ ಹಾಕಿ ನಿಂತುಕೊಂಡವು ಅತ್ತ ಎತ್ತುಗಳ ಘಂಟಯ ಶಬ್ದ ಮತ್ತು ರೈತರ ಮಾತು ಕೇಳಿ ನಿರಾಶೆಯಿಂದಲೂ, ಕೋಪದಿಂದಲೂ ಹುಲಿ ಘರ್ಜಿಸುತ ಪಲಾಯನ ಮಾಡಿತು. ಗಾಡಿಯವರು ಸ್ವಲ್ಪಹೊತ್ತು ಗಾಡಿಯ ಬಳಿಯೇ ನಿಂತು ನೋಡಿದರು ಮತ್ತೆ ಘರ್ಜನೆ ಕೇಳಲಿಲ್ಲ. ಆನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟ ಹಾರಿಸಿ ಕೈಲಾದಷ್ಟು ಗಲಬೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

೩. **ಶಾನುಭೋಗರ ವಂಶಸ್ಥರು ಖಿರ್ದಿ ಪುಸ್ತಕವನ್ನು ಕಾಪಾಡಿಕೊಂಡು ಬಂದ ಬಗೆಯನ್ನು ತಿಳಿಸಿ?**

ಶಾನುಭೋಗರಂತು ಈಗ ಇಲ್ಲ, ಆದರೆ ಅವರ ವಂಶಸ್ಥರು ಶಾನುಭೋಗರನ್ನು ಕಾಪಾಡಿದ ಖಿರ್ದಿ ಪುಸ್ತಕವನ್ನು ದೇವರ ಮಂದಾಸನದ ಮೇಲೆ ಮಂಡಿಸಿ ಇಂದಿಗೂ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ, ಅವರೆಲ್ಲರ ಕೃತಜ್ಞತೆಯು ಆ ಪುಸ್ತಕಕ್ಕೆ ಇಂದಿಗೂ ಸಲ್ಲುತ್ತಿದೆ.

## ಗದ್ಯ ಪಾಠ – ೦೭

## ವೃಕ್ಷಸಾಕ್ಷಿ

**೧. 'ವೃಕ್ಷಸಾಕ್ಷಿ'ಕಥೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?**

ವೃಕ್ಷಸಾಕ್ಷಿ ಕಥೆಯನ್ನು ದುರ್ಗಸಿಂಹನ ಕರ್ನಾಟಕ ಪಂಚತಂತ್ರ ಎಂಬ ಕೃತಿಯಿಂದ ಆರಿಸಲಾಗಿದೆ.

**೨. ದುಷ್ಟಬುದ್ಧಿಯು ಧರ್ಮ ಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**

ದುಷ್ಟಬುದ್ಧಿಯು ಧರ್ಮ ಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು.

**೩. ಧರ್ಮಾಧೀಕರಣರು ಏಕೆ ವಿಸ್ಮಯ ಹೊಂದಿದರು?**

ಧರ್ಮ ಬುದ್ಧಿಯೇ ಹೊನ್ನನ್ನು ಕದ್ದಿರುವೆ ಎಂಬುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿಯೆಂದು ದೃಷ್ಟ ಬುದ್ಧಿ ಹೇಳಿದುದನ್ನು ಕೇಳಿ ಧರ್ಮಾಧೀಕರಣರು ವಿಸ್ಮಯ ಹೊಂದಿದರು.

**೪. ಧರ್ಮ ಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**

ಸೂರ್ಯೋದಯವಾದೊಡನೆ ಧರ್ಮ ಬುದ್ಧಿಯು ದೇವಗುರು, ದ್ವಿಜ ಪೂಜೆಗಳು ಮಾಡುತ್ತಾ ಬೆಳಗಿನ ಹೊತ್ತನ್ನು ಕಳೆದನು.

**೫. ಧರ್ಮಾಧೀಕರಣರು ವಟವೃಕ್ಷ ಸಮೀಪಕ್ಕೆ ಏಕೆ ಬಂದರು?**

ಧರ್ಮ ಬುದ್ಧಿ ಮತ್ತು ದುಷ್ಟಬುದ್ಧಿ ಯರ ನಡುವಿನ ಜಗಳವನ್ನು ಪರಿಹರಿಸಲಿ ಎಂದು ಧರ್ಮಾಧೀಕರಣರು ವಟವೃಕ್ಷದ ಸಮೀಪಕ್ಕೆ ಸಾಕ್ಷಿ ಕೇಳಲು ಬಂದರು.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**೧. ಧರ್ಮ ಬುದ್ಧಿಗೆ ದುಷ್ಟಬುದ್ಧಿಯ ಯಾವ ಸಲಹೆಯಿತ್ತನು?**

ವ್ಯಾಪಾರದಿಂದ ಬಂದ ಹೊನ್ನನ್ನು ಹಂಚಿಕೊಳ್ಳೋಣ ವೆಂದು ಧರ್ಮಬುದ್ಧಿ ದುಷ್ಟ ಬುದ್ದಿಗೆ ಹೇಳಿದಾಗ ದುಷ್ಟಬುದ್ಧಿ ಪಾಪ ಕರ್ಮವನ್ನು ಯೋಚಿಸಿ ಧರ್ಮ ಬುದ್ಧಿಗೆ ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ.ಆದ್ದರಿಂದ ನಮ್ಮ ಖರ್ಚಿಗೆ ಬೇಕಾಗುವಷ್ಟು ಹೊನ್ನನೂ ತೆಗೆದುಕೊಂಡು ಉಳಿದ ಹೊನ್ನನ್ನು ಇಲ್ಲಿಯೇ ಈ ವಟವೃಕ್ಷದ ಕೆಳಗೆ ಹೂಳೋಣ ಎಂದು ದುಷ್ಟಬುದ್ಧಿ ಸಲಹೆ ನೀಡಿದನು.

**೨. ದುಷ್ಟಬುದ್ಧಿಯು ನನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

ದುಷ್ಟಬುದ್ಧಿಯ ಮನೆಗೆ ಬಂದವನೇ ತನ್ನ ತಂದೆಯ ಕೈಹಿಡಿದು ಏಕಾಂತಕ್ಕೆ ಕರೆದುಕೊಂಡು ಹೋಗಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸುತ್ತಾನೆ ನಿಮ್ಮ ಒಂದು ಮಾತಿನಿಂದ ನಮ್ಮ ಪರಿವಾರ ವೆಲ್ಲ ಹಲವು ಕಾಲ ಸುಖವಾಗಿ ಬಾಳಬಹುದು.ಮರದ ಪೊಟರೆಯಲ್ಲಿ ಅಡಗಿ ಕುಳಿತು ಧರ್ಮ ಬುದ್ಧಿಯೇ ಹೊನ್ನನ್ನೆಲ್ಲವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ನುಡಿಯಬೇಕು ಎಂದು ತನ್ನ ತಂದೆಗೆ ಹೇಳುತ್ತಾನೆ.

## ಪದ್ಯಪಾಠ–೦೧

## ಸಂಕಲ್ಪಗೀತೆ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

**೧. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?**

ಉ. ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.

**೨. ನದೀಜಲಗಳು ಏನಾಗಿವೆ?**

ಉ. ನದೀಜಲಗಳು ಕಲುಷಿತವಾಗಿವೆ.

**೩. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**

ಉ. ಕಲುಷಿತವಾದ ನದಿಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

**೪. ಕಾಡುಮೇಡುಗಳ ಸ್ಥಿತಿ ಹೇಗಿದೆ?**

ಉ. ಕಾಡುಮೇಡುಗಳು ಬರಡಾದ ಸ್ಥಿತಿಯಲ್ಲಿವೆ.

**೫. ಯಾವ ಎಚ್ಚರದೊಳು ಬದುಕಬೇಕಿದೆ?(೨೦೧೭ಏಪ್ರಿಲ್)**

ಉ. ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳೂ ಬದುಕಬೇಕಿದೆ.

# ಪದ್ಯಪಾಠ–೦೨
# ಹಕ್ಕಿಹಾರುತಿದೆ ನೋಡಿದಿರಾ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. **.ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ? (ಪೂ.ಸಿ.ಪ 2020)**
   ಹಕ್ಕಿ ಎವೆತರೆಗೆದಿಕ್ಕುವ ಹೊತ್ತಿನ ಒಳಗೆ ಅಂದರೆ ಕಣ್ಣು ರೆಪ್ಪೆ ಮಿಟುಕಿಸುವಷ್ಟು ಸಮಯದಲ್ಲಿ ಗಾವುದ ಗಾವುದಗಾವುದ ವೇಗದಲ್ಲಿ ಹಾರುತ್ತಿದೆ.
2. **ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ? (2018 ಏಪ್ರಿಲ್)**
   ಹಕ್ಕಿಯ ಗರಿಯಲ್ಲಿ ಬಿಳಿ –ಹೊಳೆಯುವ ಬಣ್ಣಗಳಿವೆ.
3. **ಹಕ್ಕಿಯ ಕಣ್ಣುಗಳು ಯಾವುವು? (ಕ.ವ.ಶ.ಶಿ.ಸಂ 2020)**
   ಹಕ್ಕಿಯ ಕಣ್ಣುಗಳು ಸೂರ್ಯ ಮತ್ತು ಚಂದ್ರರಾಗಿದ್ದಾರೆ.
4. **ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**
   ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.
5. **ಹಕ್ಕಿ ಯಾರನ್ನು ಹರಸಿದೆ?**
   ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.
6. **ಹಕ್ಕಿಯು ಯಾವುದರ ಸಂಕೇತವಾಗಿದೆ? (2019 ಜೂನ್)**
   ಹಕ್ಕಿಯು ಕಾಲದ ಸಂಕೇತ ವಾಗಿದೆ.
7. **ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?**
   ಹಕ್ಕಿಯ ಚುಂಚಗಳು ದಿಗ್ಮಂಡಲಗಳ ಅಂಚಿನ ಆಚೆಗೂ ಚಾಚಿದೆ.

# ಪದ್ಯಪಾಠ–೩
# ಹಲಗಲಿ ಬೇಡರು

**I. ಒಂದು ವಾಕ್ಯದಲ್ಲಿ ಉತ್ತರಿಸಿ**

1. **ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು? (ಮಾರ್ಚ್ 2018 ಜೂನ್ 2019)**
   **ಉ:** ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು.
2. **ಹಲಗಲಿಯ ನಾಲ್ವರು ಪ್ರಮುಖರು ಯಾರು?**
   **ಉ:** ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.
3. **ಹಲಗಲಿಯ ಗುರುತು ಉಳಿಯದಂತಾದದು ಏಕೆ?**
   **ಉ:** ಕಂಪನಿ ಸರ್ಕಾರ ಹಲಗಲಿಯ ಮೇಲೆ ಗುಂಡು ಹಾರಿಸಿ, ಕೊಳ್ಳಿ ಇಟ್ಟು ಬೂದಿ ಮಾಡಿದರು. ಇದರಿಂದ ಹಲಗಲಿ ಗುರುತು ಉಳಿಯದಂತಾಯಿತು.
4. **ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**
   **ಉ:** "ಹಲಗಲಿಯ ಬಂಟರ ಹತಾರ ಕದನ" ಹಲಗಲಿ ಲಾವಣಿಗೆ ಕಾರಣವಾಗಿದೆ
5. **ಹಲಗಲಿ ಗ್ರಾಮ ಎಲ್ಲಿದೆ?**
   **ಉ:** ಇಂದಿನ ಬಾಗಲಕೋಟೆ ಜಿಲ್ಲೆಯ ಮುಧೋಳ ಸಂಸ್ಥಾನದಲ್ಲಿ ಹಲಗಲಿ ಗ್ರಾಮ ಇದೆ.

# ಪದ್ಯಪಾಠ–೪
# ಕೌರವೇಂದ್ರನ ಕೊಂದೆ ನೀನು

**I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

**1. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**

**ಉ:** ಶ್ರೀ ಕೃಷ್ಣನು ಕರ್ಣನನ್ನು ಮೈದುನನ್ನು ಕಾಣುವಷ್ಟೇ ಪ್ರೀತಿಯಿಂದ ಬರ ಸೆಳೆದು ಕೂರಿಸಿಕೊಂಡನು.

**2. ಕುಮಾರವ್ಯಾಸನ ಆರಾಧ್ಯ ದೈವ ಯಾರು ?**

**ಉ:** ಕುಮಾರವ್ಯಾಸನ ಆರಾಧ್ಯ ದೈವ "ಗದುಗಿನ ವೀರ ನಾರಾಯಣ"

**3. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?**

**ಉ:** ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ–ಸಹದೇವರು

**4. ಕುಮಾರವ್ಯಾಸನಿಗಿರುವ ಬಿರುದು ಯಾವುದು ?**

**ಉ:** ಕುಮಾರವ್ಯಾಸನಿಗೆ "ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಬಿರುದಿತ್ತು

**5. ನಾರಾಣಪ್ಪನಿಗೆ "ಕುಮಾರವ್ಯಾಸ" ಎಂಬ ಹೆಸರು ಏಕೆ ಬಂತು?**

**ಉ:** ನಾರಾಣಪ್ಪನು ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿತು.

# ಪದ್ಯಪಾಠ – ೫.
# ಹಸರು

**I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?**
ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ

**2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?**
ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಿನಲ್ಲಿದೆ

**3. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?**
ಹಸುರು ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

**4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?**
ಕವಿಗೆ ಹುಲ್ಲಿನ ಹಾಸು ಮಕ ಮಲ್ಲಿನ ಹೊಸ ಪಚ್ಚೆಯ ಜಮಖಾನೆಯ ರೀತಿ ಕಂಡಿದೆ

**5. ಕವಿಯ ಆತ್ಮ ಎಲ್ಲಿ ಎಲ್ಲಿ ಹಸುರಾಗಿದೆ?**
ಕವಿಯ ಆತ್ಮ ಶ್ಯಾಮಲ ವನಧಿಯಲಿ ಹಸುರಾಗಿದೆ.

**II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

**1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?**

ನವರಾತ್ರಿಯಲ್ಲಿ ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ, ಹಸುರಾದ ಕವಿಯ ಹೃದಯಕ್ಕೆ ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಲಿನಲ್ಲಿ ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.

2. **ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಗೋಚರವಾದರೆ, ಹೂವಿನ ಕಂಪಿನ ಹಸುರು ಮೂಗಿಗೆ ಎಲರಿನ ತಂಪಿನ ಸ್ಪರ್ಶ ಚರ್ಮಕ್ಕೆ, ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ ಕಿವಿಗೆ, ಶಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಿಗೆಗೆ ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರಿಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತ ಪೂರ್ಣವಾಗಿ ವರ್ಣಿಸಿದ್ದಾರೆ.

3. **ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

ಕವಿಯಾತ್ಮವು ಹಸುರುಗಟ್ಟಲು ಅಶ್ವಯುಜ ಮಾಸದ ನವರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ, ಹಸುರು ಮುಗಿಲು, ಹಸುರು ಗದ್ದೆಯ ಬಯಲು, ಹಸುರಿನ ಮಲೆ, ಹಸುರು ಕಣಿವೆ, ಸಂಜೆಯ ಬಿಸಿಲು, ಅಶ್ವೀಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ. ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ, ಹುಲ್ಲಿನ ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು, ತಂಗಾಳಿಯ ತಂಪು, ಹಕ್ಕಿಯ ಇಂಪಾದ ಗಾನ, ಎತ್ತೆತ್ತ ನೋಡಿದರೂ ಹಸುರು, ಹಸುರು.. ಈ ಇವೆಲ್ಲಾ ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾದವು.

## III. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ

1. **ಹಸುರು ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ?**

ಹಸುರು ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪು ಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ ಕವಿಶೈಲ ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ ಪ್ರಕೃತಿ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ತೋರಿಸುತ್ತದೆ. ಕವಿಯಾತ್ಮವು ಹಸುರುಗಟ್ಟಲು ಅಶ್ವಯುಜ ಮಾಸದ ನವರಾತ್ರಿಯ ದಿನದಲ್ಲಿ ಹೊಸ ಚಿಗುರಿನಿಂದ ಕೂಡಿದ ಭೂಮಿಯಲ್ಲಿ ವಿಶಾಲವಾದ ಶ್ಯಾಮಲ ಕಡಲು ಹಸುರಾಗಿರುವುದನ್ನು ನೋಡಿ ಕವಿಯ ಆತ್ಮವನ್ನು ರಸಪಾನದಲ್ಲಿ ಮಿಂದಿತು. ಆಗಸದಲ್ಲಿ ಮುಗಿಲಿನಲ್ಲಿ, ಗದ್ದೆಯ ಬಯಲಿನಲ್ಲಿ, ಬೆಟ್ಟಗುಡ್ಡದಲ್ಲಿ, ಕಣೀವೆಯಲ್ಲಿ, ಸಂಜೆಯ ಬಿಸಿಲಿನಲ್ಲಿ ಹಸುರು ಹರಡಿತು, ಹಾಗೆಯೇ ಅಶ್ವೀಜ ಮಾಸದಲ್ಲಿ ಭತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ. ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ. ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರಲು ಕವಿಗೆ ಬೇರೆ ಬಣ್ಣಗಳೇ ಕಾಣದಾದವು. ಹೊಸ ಹೂವಿನ ಕಂಪು ತಂಗಾಳಿಯ ತಂಪು, ಹಕ್ಕಿಯ ಇಂಪಾದ ಗಾನ, ಅತ್ತ–ಇತ್ತ–ಎತ್ತ ನೋಡಿದರೂ ಹಸುರು.. ಹಸುರು.. ಇದನ್ನು ನೋಡಿದ ಕವಿಯಾತ್ಮವು ಹಸುರುಗಟ್ಟಿತು. ಕವಿಯ ದೇಹದಲ್ಲೂ ಹಸುರು ರಕ್ತವೇ ಹರಿದಾಡಿತು. ಎಂದು ಹಸುರು ವ್ಯಾಪಿಸಿದ ಬಗೆಯನ್ನು ಕವಿ ವರ್ಣಿಸಿದ್ದಾರೆ.

2. **ಪ್ರಕೃತಿಯ ಹಸುರು ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ?**

ಹಸುರು ಸಕಲ ಜೀವಿಗಳ ಉಸಿರು ಇದ್ದಂತೆ ಹಸುರು ಪ್ರಕೃತಿಯ ಸಂಭ್ರಮವನ್ನು ತೋರಿಸುತ್ತದೆ ಹಸಿರು ಸಂಮೃದ್ಧಿಯ ಸಂಕೇತ ಭೂಮಿ ಹಸುರಿನಿಂದ ಕಂಗೊಳಿಸುತ್ತಿದೆ ಎಂದರೆ ಭೂಮಿ ಸಂಮೃದ್ಧವಾಗಿದೆ ಎಂದೇ ಅರ್ಥ. ಕವಿ ಕುವೆಂಪು ರವರು ಪ್ರಕೃತಿಯನ್ನು ನೋಡಿದ ಭಾವ ಹಸುರುಮಯವಾಗಿದೆ. ಪ್ರಕೃತಿಯ ಚರಾಚರಾ ವಸ್ತುಗಳು ಕೂಡ ಕವಿಯ ಆತ್ಮವನ್ನು ಹಸುರುಮಯವಾಗಿಸಿ ಇಡೀ ಪ್ರಕೃತಿಯ ಜೊತೆಗೆ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮಿಂದಿದ್ದಾರೆ. ಇದು ಪ್ರಕೃತಿಯೊಂದಿಗಿನ ಅದ್ವೈತ ಸ್ಥಿತಿಯನ್ನು ಎತ್ತಿ ತೋರಿಸಿದೆ ಹಸುರಿನಿಂದ ಕೂಡಿದ ಮರಗಿಡ ಪೈರುಗಳು ಪ್ರಾಣಿ, ಪಕ್ಷಿ, ಮಾನವ ಮೊದಲಾದ ಜೀವ ಜಗತ್ತಿಗೆ ಆಹಾರ ಆನಂದವನ್ನು ಉಂಟು ಮಾಡುತ್ತದೆ ಹಸುರಾದ ಮರ ಕಣಿವೆ, ತೋಟಗಳು, ಬತ್ತದ ಗದ್ದೆಗಳು, ಆಗಸಗಳು ಎಲ್ಲರ ಕಣ್ಣಿಗೆ ಮನಸ್ಸಿಗೆ ಅಹ್ಲಾದವನ್ನು ತರುವುದರ ಜೊತೆಗೆ ಜೀವವನ್ನು ತುಂಬುತ್ತವೆ ಆದ್ದರಿಂದ ಹಸಿರು ಇಳೆಯ ಉಸಿರಾಗಿದೆ. ಜೀವಿಗಳ ಉಸಿರು ಇರಬೇಕಾದರೆ ಹಸುರು ಬಹಳ ಮುಖ್ಯ. ಆದ್ದರಿಂದ ಭೂಮಿಯ ಮೇಲಿನ ಹಸುರನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನನ್ನ ಅಭಿಪ್ರಾಯವಾಗಿದೆ.

## ಪದ್ಯಭಾಗ-೦೬
## ಛಲಮನೆ ಮೆಱೆವೆಂ

1. **ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೆ ಎಂದು ದುರ್ಯೋಧನ ಯಾರಿಗೆ ಹೇಳುವನು?**
   ಉ: ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೆ ಎಂದು ದುರ್ಯೋಧನ ಭೀಷ್ಮಾಚಾರ್ಯರಿಗೆ ಹೇಳುವನು.
2. **ದಿನಪಸುತ ಎಂದರೆ ಯಾರು?**
   ಉ: ದಿನಪಸುತ ಎಂದರೆ ಕರ್ಣ
3. **ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?**
   ಉ: ಪಾರ್ಥ, ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.
4. **ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?**
   ಉ: ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ
5. **ಅಂತಕಾತ್ಮಜ ಎಂದರೆ ಯಾರು?**
   ಉ: ಅಂತಕಾತ್ಮಜ ಎಂದರೆ ಧರ್ಮರಾಯ (ಯುದಿಷ್ಠಿರ)
6. **ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ ಎಂದು ದುರ್ಯೋಧನನಿಗೆ ಹೇಳಿದವರು ಯಾರು?**
   ಉ: ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ ಎಂದು ದುರ್ಯೋಧನನನಿಗೆ ಹೇಳಿದವರು ಭೀಷ್ಮಾಚಾರ್ಯರು.

## ಪದ್ಯಪಾಠ – ೦೭
## ವೀರಲವ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು?**

ಜೈಮಿನಿ ಭಾರತವನ್ನು ಬರೆದ ಕವಿ ಲಕ್ಷ್ಮೀಶ.

2. **ಯಜ್ಞಾಶ್ವವನ್ನು ಕಟ್ಟಿದವರು ಯಾರು?**

ಯಜ್ಞಾಶ್ವವನ್ನು ಕಟ್ಟಿದವರು ವೀರಲವ.

3. **ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು? (ಮಾರ್ಚ್ – 2018)**

ಕುದುರೆಯನ್ನು ಲವನು ತನ್ನ ಉತ್ತರೀಯಿಂದ ಕಟ್ಟಿದನು.

**4.ಮುನಿಸುತರು ಹೆದರಲು ಕಾರಣವೇನು?**

ವೀರಲವನು ಯಜ್ಞಾಶ್ವವನ್ನು ಕಟ್ಟಿಹಾಕಿದ್ದರಿಂದ ಮುನಿಸುತರು ಹೆದರಿದರು.

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

**1.ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ?**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಶತೃಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು ಹೀಗೆ ಯಜ್ಞಾಶ್ವ ಭೂಮಿಯಲ್ಲೆಲ್ಲಾ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳ ಹೊಕ್ಕಿತ್ತು.

**2.ಯಜ್ಞಾಶ್ವನ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

**3.ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ, ಲವನಿಗೂ ನಡೆದ ಸಂವಾದವನ್ನು ಬರೆಯಿರಿ?**

ಲವನು ಆಶ್ರಮವನ್ನು ಹೊಕ್ಕಿ ಯಜ್ಞಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡ ಬೇಡ ಅರಸುಗಳ ಕುದುರೆಯನ್ನು ಬಿಡು ಅವರು ನಮ್ಮನ್ನು ಹೊಡೆಯುವರು" ಎಂದು ಹೇಳಿದರು. ಆಗ ಲವನು ನಗುತ್ತಾ ಬ್ರಾಹ್ಮಣರ ಮಕ್ಕಳು ಹೆದರಿದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ? ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

## ಪಠ್ಯ ಪೂರಕ ಪಾಠಗಳು

## 1. ಸ್ವಾಮಿ ವಿವೇಕಾನಂದರ ಚಿಂತನೆಗಳು

**ಒಂದು ವಾಕ್ಯದ ಪ್ರಶ್ನೋತ್ತರಗಳು:**

**1. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ?**

ಉ: ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಫೋಟ, ಸ್ಪಷ್ಟತೆಗಳ ರೂಪಕವಾಗಿದ್ದಾರೆ.

**2. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?**

ಉ: ವಿವೇಕಾನಂದರು ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸುತ್ತಾರೆ.

**3. ಜಾತಿ ವ್ಯವಸ್ಥೆಯ ಕೌರ್ಯಕ್ಕೆ ತುತ್ತಾಗಿರುವವರು ಯಾರು?**

ಉ: ಜಾತಿ ವ್ಯವಸ್ಥೆಯ ಕೌರ್ಯಕ್ಕೆ ತುತ್ತಾಗಿರುವವರು ಶೂದ್ರರು ಹಾಗೂ ಅಸ್ಪೃಶ್ಯರು.

**4. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು?**

ಉ: ಸರ್ವಧರ್ಮ ಸಮ್ಮೇಳನವು 11–09–1893 ರಲ್ಲಿ ಚಿಕಾಗೋದಲ್ಲಿ ನಡೆಯಿತು.

**5. ವಿವೇಕಾನಂದರನ್ನು "ಮಾನವತಾ ಮಿತ್ರ" ರೆಂದು ಕರೆದವರಾರು?**

ಉ: ವಿವೇಕಾನಂದರನ್ನು "ಮಾನವತಾ ಮಿತ್ರ" ರೆಂದು ಕರೆದವರು ಕುವೆಂಪುರವರು.

**6. ವಿವೇಕಾನಂದರು ಮೊದಲನೆ ಆದ್ಯತೆ ಯಾವುದಕ್ಕೆ ನೀಡಬೇಕೆಂದಿದ್ದಾರೆ?**

ಉ:ವಿವೇಕಾನಂದರು ಮೊದಲನೆ ಆದ್ಯತೆಯನ್ನು ದೈಹಿಕ ಹಸಿವನ್ನು ಇಂಗಿಸುವುದಕ್ಕೆ ನೀಡಬೇಕೆಂದಿದ್ದಾರೆ.

**7. ವಿವೇಕಾನಂದರ ಪ್ರಕಾರ ಯಾವುದು ಸಮಾಜದ ಆಂತರಿಕ ಭಾಗವಾಗಿದೆ?**

ಉ: ವಿವೇಕಾನಂದರ ಪ್ರಕಾರ ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ.

**8. ವಿವೇಕಾನಂದರು ಯಾರನ್ನು ಮಹಾವಾರಿಧಿಯ ತರಂಗಗಳು ಮಾತ್ರ ಎಂದು ಘೋಷಿಸಿದರು?**

ಉ: ವಿವೇಕಾನಂದರು ಕ್ರೈಸ್ತ, ಬುದ್ಧ, ರಾಮರೆಲ್ಲರೂ ಮಹಾವಾರಿಧಿಯ ತರಂಗಗಳು ಮಾತ್ರ ಎಂದು ಘೋಷಿಸಿದರು

**9. ವಿವೇಕಾನಂದರ ಪ್ರಕಾರ ಸಮಾಜ ಕ್ರಾಂತಿಯ ಅಂಶಗಳಾವುವು?**

ಉ: ವಿವೇಕಾನಂದರ ಪ್ರಕಾರ ಸಮತಾವಾದ ಅರಾಜಕವಾದ ಶೂನ್ಯವಾದಗಳು ಸಮಾಜ ಕ್ರಾಂತಿಯ ಅಂಶಗಳು.

**10. ವಿವೇಕಾನಂದರು ಯಾವುದಕ್ಕೆ ಉಗ್ರ ವಿರೋಧಿಯಾಗಿದ್ದರು?**

ಉ: ವಿವೇಕಾನಂದರು ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು.

**ಮೂರು – ನಾಲ್ಕು ವಾಕ್ಯದ ಪ್ರಶ್ನೋತ್ತರಗಳು:**

**1. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?**

ಉ: ಸ್ವಾಮಿ ವಿವೇಕಾನಂದರು ಜಾತಿ ವ್ಯವಸ್ಥೆಯನ್ನು ಕುರಿತು "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ.ಹಿಂದೆ ಅದು ವಿಕಾಸವಾಗುತ್ತಿತ್ತು.ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ" ಎಂದು ಹೇಳಿದ್ದಾರೆ.

**2. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?**

ಉ: ಸ್ವಾಮಿ ವಿವೇಕಾನಂದರು ಕೋಮುವಾದವನ್ನು ವಿರೋಧಿಸುತ್ತಾ, ಅವರು " ಏಕ ಸಂಸ್ಕೃತಿ ಮತ್ತು ಏಕ ಧರ್ಮ ವಿಸ್ತರಣೆಗಳ ಪರವಾಗಿರಲಿಲ್ಲ. ಅದು ಹಿಂದೂ ಧರ್ಮವಿರಲಿ, ಕ್ರೈಸ್ತ ಧರ್ಮವಿರಲಿ, ಇಸ್ಲಾಂ ಧರ್ಮವಿರಲಿ, ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವ ವಿರೋಧವೆಂದು ಭಾವಿಸಿದ್ದರು".

**3. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?**

ಉ: ವಿವೇಕಾನಂದರು 11/09/1893 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತಾ "ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಾಭಿಮಾನಗಳು ಈ ಸುಂದ ಜಗತ್ತನ್ನಾವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಕ್ಕದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು" ಎಂದು ಹೇಳಿದರು.

**4. ಸ್ವಾಮಿ ವಿವೇಕಾನಂದರು ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋದಿಯಾಗಿದ್ದರು ಏಕೆ?**

ಉ: ದೈಹಿಕ ಹಸಿವನ್ನು ಹಿಂಗಿಸುವುದು ಅವರ ಮೊದಲ ಆದ್ಯತೆ, ಅನಂತರ ಆತ್ಮದ ಹಸಿವು, ವೇದಾಂತದ ಹಸಿವು, ಸಾಂಸ್ಥಿಕವಾದ ಧರ್ಮದ ಹಸಿವು, ಈ ಕಾರಣದಿಂದಾಗಿಯೇ ವಿವೇಕಾನಂದರು ಮೂಲಭೂತವಾದಿಯಾಗಿರಲಿಲ್ಲ ಬದಲಾಗಿ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋದಿಯಾಗಿದ್ದರು.

**5. ಸ್ವಾಮಿ ವಿವೇಕಾನಂದರ ಚಿಂತನೆಗಳು ಇಂದಿನ ಸನ್ನಿವೇಶಕ್ಕೂ ಹೆಚ್ಚು ಪ್ರಸ್ತುತವಾಗಿದೆ ವಿವರಿಸಿ.**

ಉ: ಏಕ ಸಂಸ್ಕೃತಿ ಹಾಗೂ ಏಕಧರ್ಮ ವಿಸ್ತರಣೆ, ಸ್ವಮತಾಭಿಮಾನ, ಅನ್ಯ ಮತದ್ವೇಷ ಇವುಗಳು ಇಂದಿನ ಸಮಾಜದ ದುರವಸ್ಥೆಗೆ ಕಾರಣವಾಗಿದ್ದು, ಸ್ವಾಮಿ ವಿವೇಕಾನಂದರು ತಮ್ಮ ಚಿಂತನೆಗಳಲ್ಲಿ ಈ ಅಂಶಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಇಂದಿಗೂ ಸ್ವಾಮಿ ವಿವೇಕಾನಂದರ ಚಿಂತನೆಗಳು ಪ್ರಸ್ತುತವಾಗಿದೆ ಎಂದು ಹೇಳಬಹುದು.

**6. ಮಾನವ ಜನಾಂಗ ಹಿಂದುಳಿಯಲು ಕಾರಣವಾದ ಸಂಗತಿಗಳು ಯಾವುದೆಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ?**

ಉ: ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ, ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು ಎಂದು ಹೇಳಿದ್ದಾರೆ.

## 2 ವಸಂತ ಮುಖತೋರಲಿಲ್ಲ

**ಒಂದು ವಾಕ್ಯದ ಪ್ರಶ್ನೋತ್ತರಗಳು:**

**1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?**

ಉ: ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

**2. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?**

ಉ: ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.

**3. ಯಾರಿಗೆ ವಸಂತಮುಖ ತೋರಲಿಲ್ಲ?**

ಉ: ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರನಿಗೆ ವಸಂತಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು?**

ಉ: ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಎಂದು ಪುಟ್ಟಿ ಪ್ರಶ್ನಿಸಿಕೊಳ್ಳುತ್ತಾಳೆ.

**5. ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

ಉ: ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು, ಮನತುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತಹ ಸಂಭ್ರಮ ಈ ಕವನದಲ್ಲಿ ವ್ಯಕ್ತವಾಗಿದೆ.

**6. ಬಾಲ ರವಿ ಎಲ್ಲಿ ಸೊರಗಿದ್ದಾನೆ?**

ಉ: ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ.

**7. ಪುಟ್ಟಿಯ ಮನೆಗೆ ವಸಂತ ಬರಲು ಏಕೆ ಹೆದರಿದ್ದಾನೆ?**

ಉ: ಗುಡಿಸಲೊಳಗೆ ಕತ್ತಲು ಗವ್ವೆನ್ನುತಿದ್ದುದರಿಂದ ವಸಂತ ಬರಲು ಹೆದರಿದ್ದಾನೆ.

**8. 'ವಸಂತ ಮುಖ ತೋರಲಿಲ್ಲ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆರಿಸಿಲಾಗಿದೆ?**

ಉ: 'ವಸಂತ ಮುಖ ತೋರಲಿಲ್ಲ' ಕವಿತೆಯನ್ನು 'ಮುಗಿಲ ಮಲ್ಲಿಗೆ' ಕವನ ಸಂಕಲನದಿಂದ ಆರಿಸಿಲಾಗಿದೆ.

**9. ಒಡೆಯನ ಅಂಗಳದಲ್ಲಿ ಏನಿದೆ?**

ಉ: ಒಡೆಯನ ಅಂಗಳದಲ್ಲಿ ಮೈತುಂಬಿ ನಿಂತ ಮಾವಿನ ಮರಗಳಿವೆ.

**ಮೂರು – ನಾಲ್ಕು ವಾಕ್ಯದ ಪ್ರಶ್ನೋತ್ತರಗಳು:**

**1. ಪುಟ್ಟಿ ಏಕೆ ಮೂಕ ವಿಸ್ಮಿತಗಳಾಗಿದ್ದಳು?**

ಉ: ಬಾಗಿಲಲಿ ಬಳಕುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವಲಿ ಬೀರುವ ಮುಗುಳು ನಗೆ,
ಹೊಳೆವ ರಂಗೋಲಿಯಲಿ ಥಳಥಳಿಸುವ ಬಾಲ ರವಿಯ ಕಂಡು ಪುಟ್ಟಿ ಮೂಕವಿಸ್ಮಿತಗಳಾಗಿದ್ದಾಳೆ.

2. **ಪುಟ್ಟಿಯ ಗುಡಿಸಲಿನಲ್ಲಿ ಇರುವ ವಾತಾವರಣವನ್ನು ವಿವರಿಸಿ. ಅಥವಾ ಗುಡಿಸಲಿನ ಒಳಗೆ ವಸಂತನ ಹೆದರಿಕೆಗೆ ಕಾರಣಗಳೇನು?**

ಉ: ಪುಟ್ಟಿಯ ಗುಡಿಸಲಿನಲ್ಲಿ ಅಮ್ಮ ಗೂರುತ್ತಾ ಮಲಗಿದ್ದಾಳೆ. ಅವಳ ಸೀರೆ ತೂತು ಬಿದ್ದಿದೆ. ಉದಯಿಸುತ್ತಿರುವ ಸೂರ್ಯನ ಬೆಳಕೂ ಸಹ ಒಳಗೆ ಬರಿತ್ತಿಲ್ಲ. ಗೊಡೆಗಳು ಸುಣ್ಣ ಕಾಣದೇ ಕೊಳಕಾಗಿವೆ. ಅಲ್ಲಿ ಗವ್ವೆನ್ನುವ ಕತ್ತಲಿದೆ.ಆದ್ದರಿಂದ ಗುಡಿಸಲಿನ ಒಳಗೆ ಬರಲು ವಸಂತನು ಹೆದರಿದನು.

## 3. ಭಗತ್‌ಸಿಂಗ್

**ಒಂದು ವಾಕ್ಯದ ಪ್ರಶ್ನೋತ್ತರಗಳು:**

1. **ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಎಂದು ನಡೆಯಿತು?**

ಉ: ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಏಪಿಲ್ರ್ 13, 1919 ರಂದು ನಡೆಯಿತು.

2. **ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?**

ಉ: ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.

3. **ಭಗತ್‌ಸಿಂಗ್‌ನ ಸಹಚರರು ಯಾರು?**

ಉ: ಸುಖ್‌ದೇವ್ , ರಾಜ್‌ಗುರು, ಭಟುಕೇಶ್ವರ ದತ್ತರು ಭಗತ್‌ಸಿಂಗ್‌ನ ಸಹಚರರು.

4. **ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ?**

ಉ: ಭಗತ್‌ಸಿಂಗ್ ಮಾರ್ಚ 23, 1931 ರಂದು ಹುತಾತ್ಮನಾದನು.

5. **ಬಾಲಕ ಭಗತ್‌ಸಿಂಗ್ ಮೂಕನಂತೆ ಅತ್ತಿಂದಿತ್ತ ಓಡಾಡಿತ್ತಿದುದು ಎಲ್ಲಿ?**

ಉ: ಬಾಲಕ ಭಗತ್‌ಸಿಂಗ್ ಮೂಕನಂತೆ ಅತ್ತಿಂದಿತ್ತ ಓಡಾಡಿತ್ತಿದುದು ಅಮೃತಸರದ ಜಲಿಯನ್ ವಾಲಾಬಾಗ್‌ನಲ್ಲಿ.

6. **ಭಗತ್‌ಸಿಂಗ್‌ನ ಸಹೋದರಿ ಅವನಿಗೆ ಏನನ್ನು ಕೊಟ್ಟಳು?**

ಉ: ಭಗತ್‌ಸಿಂಗ್‌ನ ಸಹೋದರಿ ಅವನಿಗೆ ಮಾವಿನ ಹಣ್ಣನ್ನು ಕೊಟ್ಟಳು.

7. **ಜಲಿಯನ್ ವಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಬ್ರಿಟೀಷ್ ಅಧಿಕಾರಿ ಯಾರು?**

ಉ: ಜಲಿಯನ್ ವಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಬ್ರಿಟೀಷ್ ಅಧಿಕಾರಿ ಜನರಲ್ ಡಯರ್.

8. **ಜನರಲ್ ಡಯರ್‌ನ ಎಣಿಕೆ ಏನಾಗಿತ್ತು?**

ಉ: ಕ್ರೂರ ಮಾರ್ಗದಿಂದ ಭಾರತೀಯರನ್ನು ಬಗ್ಗುಬಡಿಯಬಹುದೆಂಬುದು ಜನರಲ್ ಡಯರ್‌ನ ಎಣಿಕೆಯಾಗಿತ್ತು.

9. **ಜಲಿಯನ್ ವಲಾಬಾಗ್ ಹತ್ಯಾಕಾಂಡದ ಬಗ್ಗೆ ಜನರಲ್ ಡಯರ್ ಹೆಮ್ಮೆಯಿಂದ ಹೇಳಿದ್ದೇನು?**

ಉ: ಜಲಿಯನ್ ವಲಾಬಾಗ್ ಹತ್ಯಾಕಾಂಡದ ಬಗ್ಗೆ ಜನರಲ್ ಡಯರ್ ಹೆಮ್ಮೆಯಿಂದ 1650 ಸುತ್ತಿನ ಗುಂಡಿನಲ್ಲಿ "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ" ಎಂದು ಹೇಕೊಂಡನು.

**ಮೂರು ನಾಲ್ಕು ವಾಕ್ಯದ ಪ್ರಶ್ನೋತ್ತರಗಳು:**

1. **ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು?**

ಉ: ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಹೀಗಿದೆ: "ಏಪ್ರಿಲ್13– 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ."

2. **ಜಲಿಯನ್ ವಲಾಬಾಗ್‌ಗೆ ಹೋದ ಬಾಲಕ ಭಗತ್‌ಸಿಂಗ್ ಏನು ಮಾಡಿದ?**

ಉ: ಜಲಿಯನ್ ವಲಾಬಾಗ್‌ನಲ್ಲಿ ಅತ್ತಿಂದಿತ್ತ ಓಡಾಡಿದ ಬಾಲಕ ಭಗತ್‌ಸಿಂಗ್‌ನ ಬಳಿ ಒಂದೆರಡು ಪುಸ್ತಕಗಳು ಹಾಗೂ ಪುಟ್ಟ ಡಬ್ಬಿ ಅವನ ಕೈ ಚೀಲದಲ್ಲಿತ್ತು. ತುಸು ಹೊತ್ತಿನ ನಂತರ ಹುಡುಗ ಜಲಿಯನ್ ವಲಾಬಾಗ್‌ನಲ್ಲಿ ಅಂತರ್ಮುಖಿಯಾಗಿ ಬಹುಕಾಲ ನಿಂತ ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದು ಹಣೆಗಿಟ್ಟುಕೊಂಡ.ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಕರಿಸಿಕೊಂಡು ಹಿಂತಿರುಗಿದ.

3. **ಭಗತ್ ಸಿಂಗ್ ಸಹೋದರಿ ಕೊಟ್ಟ ಮಾವಿನ ಹಣ್ಣನ್ನು ನಿರಾಕರಿಸಲು ಕಾರಣವೇನು?**

ಉ: ಭಗತ್‌ಸಿಂಗ್ ತನ್ನ ಸಹೋದರಿಯನ್ನು ಮನೆಯ ಹಿಂಬಾಗಕ್ಕೆ ಕರೆದೊಯ್ದು, ತನ್ನ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿದ ರಕ್ತದಲ್ಲಿ ಕಲೆಯಿಸಿದಂತಿದ್ದ ಈ ಮಣ್ಣು ತ್ಯಾಗದ ಪ್ರತೀಕವೆಂದು ಅವಳಿಗೆ ತಿಳಿಸಿದ.ಆದ್ದರಿಂದ ಭಗತ್‌ಸಿಂಗ್ ಸಹೋದರಿ ಕೊಟ್ಟ ಹಣ್ಣನ್ನು ನಿರಾಕರಿಸಿದನು.

4. **ಭಗತ್‌ಸಿಂಗ್ ವೀರಯೋಧನಾಗಿ ಅಮರನಾದ ಬಗೆ ಹೇಗೆ?**

ಉ: ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟೀಷ್ ಸರ್ಕಾರದ ವಿರುದ್ದ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣದಂಡನೆಗೆ ಈಡಾಗಿ ತನ್ನ ಸಹಚರರಾದ ಸುಖದೇವ, ರಾಜಗುರು ಮತ್ತು ಭಟು ಕೇಶ್ವರ್ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು.

## 4.ಜನಪದ ಒಗಟುಗಳು

**I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.**

1. **ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ?**

ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಗೆ ಉತ್ತರ ಕೈಯುಂಟು ಕಾಲಲ್ಲ ಶಿರ ಅರಿದ ಮುಂಡ ಮೈಯೊಳಗೆ ನವಗಾಯ.ಒಂಭತ್ತು ತುಂಡ ಓಯ್ಯನೊಯ್ಯನೆ ಬಂದು ಹೆಗಲೇರಿಕೊಂಡ ರಾಯರಾಯರಿಗೆಲ್ಲ ತಾನೆ ಪ್ರಚಂಡ ಎಂಬುದಾಗಿದೆ.

2. **ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?**

ನೀರಲ್ಲೇ ಹುಟ್ಟೋದು ನೀರಲ್ಲೇ ಬೆಳೆಯೋದು ನೀರು ತಾಕಿದರೆ ಮಟ ಮಾಯ ಹೀಗೆ ಉಪ್ಪಿನ ವಿಶೇಷತೆ ಒಗಟಿನಲ್ಲಿ ವ್ಯಕ್ತವಾಗಿದೆ.

3. **ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?**

ಕೆಸರಿನಲ್ಲಿ ಹುಟ್ಟೋದು ಕೆಸರಿನಲ್ಲಿ ಬೆಳೆಯೋದು ಅದು ಒಂದು ಗಿಡದ ಪ್ರಕಾರ ಹೀಗೆ ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ವಿವರಿಸುತ್ತದೆ.

4 .**ಹೊಲದಲ್ಲಿ ಉಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

ಬದಿಯಲ್ಲಿ ಹುಟ್ಟೋದು ಬದಿಯಲ್ಲೇ ಬೆಳೆಯೋದು ಅದು ಒಂದು ಗಿಡದ ಪರಿಕಾರ ಆಗಿದೆ. ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವನ ಕಂಡು ನಗುವುದು ಎಂದು ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ವಿವರಿಸುತ್ತವೆ.

5 **ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

ಒಗಟುಗಳು ಬುದ್ಧಿಗೆ ಕಸರತ್ತನ್ನು ನೀಡುತ್ತವೆ ಆಲೋಚನಾ ಶಕ್ತಿ ಬೆಳೆಸುತ್ತವೆ. ಊಹಿಸುವ, ಚಿಂತಿಸುವ ಶಕ್ತಿ ಬೆಳೆಸುತ್ತವೆ. ವಿಶ್ಲೇಷಿಸುವ ಗುಣ ಹೆಚ್ಚಾಗಿ ಜ್ಞಾನ ವೃದ್ದಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸುತ್ತವೆ. ಮನರಂಜನೆ ನೀಡುತ್ತವೆ. ಹೀಗೆ ಒಗಟುಗಳು ಶೈಕ್ಷಣಿಕವಾಗೆ ಅನೇಕ ಲಾಭವಾಗುತ್ತದೆ.

6. .**ಉಪ್ಪು ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ?**

ನೀರಲ್ಲೇ ಹುಟ್ಟೋದು ನೀರಲ್ಲೇ ಬೆಳೆಯೋದು
ನೀರು ತಾಗಿದರೆ ಮಟ ಮಾಯ ಕನ್ನಡದ
ಬೆಡಗಿನ ಜಾಣೆ ತಿಳಿದೇಳೆ
ಇದು ಉಪ್ಪು ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ

8 **ತಾವರೆ ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ?**

ಕೆಸರಲ್ಲಿ ಹುಟ್ಟೋದು ಕೆಸರಲ್ಲೇ ಬೆಳೆಯೋದು ಅದು ಒಂದು ಗಿಡದ ಪರಿಕಾರ – ಎಲೆ ಬಾಲೆ
ಬಾಲೆ ನಮ್ಮರ್ಥ ಒಡೆದ್ದೇಳೆ ಇದು ತಾವರೆ ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ.

9 **ಉತ್ತರಾಣಿ ಗಿಡ ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ?**

ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಜರಗ ಹಿಡಿಯೋದು – ಎಲೆ ಬಾಲೆ
ಬಾರೆ ಇದರರ್ಥ ಒಡೆದ್ದೇಳೆ.ಇದು ಉತ್ತರಾಣಿಗಿಡ ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ.

10 **ಗರಿಕೆಯ ಹುಲ್ಲು ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ?**

ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು ಉಳುವಾನ ಕಂಡು ನಗುವುದು – ಎಲೆ ಬಾಲೆ
ಬಾರೆ ಇದರರ್ತ ಒಡೆದ್ದೇಳೆ.ಇದು ಗರಿಕೆಯ ಹುಲ್ಲು ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ.

11 **ಬೀಸುಕಲ್ಲು ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.**

ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿಂಬುವುದು ನಂಗ್ಹೇಳಿ ಅರ್ತು ಈ ನಾಡಿನ– ಹೇಳ್ದಿರೆ
ಕೈಗೆ ಹಲ್ಮುರಿದು ಕೊಡುವೆನು ಇದು ಬೀಸುಕಲ್ಲು ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ

# ಸಾಹಿತಿಗಳ/ಕವಿಗಳ ಪರಿಚಯ

## ಸಾರಾ ಅಬೂಬಕ್ಕರ್ :

ಸಾರಾ ಅಬೂಬಕ್ಕರ್ ಅವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು ಕಥೆ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯರು. "ಚಪ್ಪಲಿಗಳು","ಸಹನಾ", "ಕದನ ವಿರಾಮ", "ಪಯಣ", "ಖೆಡ್ಡಾ" ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ "ನೃಪತುಂಗ" ಪ್ರಶಸ್ತಿ ದೊರೆತಿದೆ.

## ಪು.ತಿ.ನ (ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್) :

ಪು.ತಿ.ನ ಕಾವ್ಯನಾಮದಿಂದ ಪ್ರಸಿದ್ಧರಾದ ಇವರು 1905 ರಂದು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಕನ್ನಡದ ನವೋದಯದ ಪ್ರಮುಖ ಕವಿಗಳಾದ ಇವರು "ಅಹಲ್ಯ", "ಶಬರಿ", "ಹಣತೆ", "ರಸಸರಸ್ವತಿ", "ಶ್ರೀಹರಿಚರಿತೆ", ಎಂಬ ಕೃತಿಗಳನ್ನು ಬರೆದಿರುವರು. ಇವರಿಗೆ ಪಂಪ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ.

## ಡಾ. ವಿನಾಯಕ ಕೃಷ್ಣ ಗೋಕಾಕ :

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾದ ಇವರು 1909 ರಂದು ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಕನ್ನಡದ ಪ್ರಮುಖ ಸಾಹಿತಿಗಳಾದ ಇವರು " ಪಯಣ", " ಉಗಮ", " ಸಮುದ್ರದಾಚೆಯಿಂದ", " ಭಾರತ ಸಿಂಧುರಶ್ಮಿ", ಮೊದಲಾದ ಕೃತಿಗಳನ್ನು ಬರೆದಿರುವರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಭಾರತ ಸರಕಾರದ ಪದ್ಮಶ್ರೀ ಪ್ರಶಸ್ತಿ ದೊರಕಿವೆ.

## ಡಿ.ಎಸ್.ಜಯಪ್ಪಗೌಡ (ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ) :

ಡಿ.ಎಸ್.ಜಯಪ್ಪಗೌಡ ಇವರು 1947 ರಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯವರು. ಇತಿಹಾಸ ಮತ್ತು ಭಾಷಾಂತರ ವಿಷಯದಲ್ಲಿ ಕೃತಿಗಳನ್ನು ರಚಿಸಿದ ಇವರು " ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು", " ಮೈಸೂರು ಒಡೆಯರು" " ಜನಪದ ಆಟಗಳು", " ಕರ್ನಾಟಕ ಗ್ರಾಮೀಣ ಸಂಸ್ಥೆಗಳು", ಎಂಬ ಕೃತಿಗಳನ್ನು ಬರೆದಿರುವರು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

## ದೇವನೂರ ಮಹಾದೇವ :

ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರಮುಖ ಲೇಖಕರಾದ ಮಹಾದೇವ ಅವರು 1948 ರಂದು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು.ಇವರು " ದ್ಯಾವನೂರು", " ಒಡಲಾಳ", " ಎದೆಗೆ ಬಿದ್ದ ಅಕ್ಷರ", " ಕುಸುಮ ಬಾಲೆ", ಎಂಬ ಕೃತಿಗಳನ್ನು ಬರೆದಿರುವರು. ಇವರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿವೆ.

## ಎ.ಎನ್.ಮೂರ್ತಿರಾವ್ ( ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್) :

ಎ.ಎನ್.ಮೂರ್ತಿರಾವ್ ಅವರು 1900 ರಂದು ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಜನಿಸಿದರು. ಕನ್ನಡದ ಪ್ರಮುಖ ಗದ್ಯ ಬರೆಹಗಾರರಾದ ಇವರು " ಹಗಲುಗನಸುಗಳು"," ಅಲೆಯುವ ಮನ", " ಚಿತ್ರಗಳು–ಪತ್ರಗಳು", " ದೇವರು"," ಮಿನುಗು–ಮಿಂಚು",ಮುಂತಾದ ಕೃತಿಗಳನ್ನು ಬರೆದಿರುವರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಶ್ತಿ, ಪಂಪ ಪ್ರಶಸ್ತಿ, ದೊರೆತಿವೆ.

## ದುರ್ಗಸಿಂಹ :

ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ (ಕಿಸುಕಾಡು ನಾಡಿನ ಸಯ್ಯಡಿ) ಗ್ರಾಮದಲ್ಲಿ 1031 ರಲ್ಲಿ ಜನಿಸಿದನು. " ಕರ್ನಾಟಕ ಪಂಚತಂತ್ರ" ಎಂಬ ಚಂಪೂ ಕಾವ್ಯದ ಕರ್ತೃ. ಜಗದೇಕ ಮಲ್ಲನ ಆಸ್ಥಾನದಲ್ಲಿ ದಂಡನಾಯಕನಾಗಿದ್ದನು ಹಾಗೂ ಮತಧರ್ಮ ಸಮನ್ವಯಕಾರನಾಗಿದ್ದ.

## ಜಿ.ಎಸ್.ಶಿವರುದ್ರಪ್ಪನವರು (ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) :

ಜಿ.ಎಸ್.ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ 1926 ರಲ್ಲಿ ಜನಿಸಿದರು.'

'ಇವರು ಸಾಮಗಾನ', 'ಚೆಲವು–ಒಲವು', 'ದೇವಶಿಲ್ಪ','ದೀಪದಹೆಜ್ಜೆ', ಕಾವ್ಯಾರ್ಥಚಿಂತನೆ, ಎದೆತುಂಬಿಹಾಡಿದೆನು' ಎಂಬ ಕೃತಿಗಳನ್ನು ಬರೆದಿದ್ದಾರೆ ಇವರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಎಂಬ ಬಿರುದು ದೊರೆತಿದೆ.

## ದ.ರಾ.ಬೇಂದ್ರೆ ( ದತ್ತಾತ್ರೇಯ ರಾಮಚಂದ್ರ ಬೇಂದ್ರೆ) :

ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ದರಾದ ಇವರು 1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಗರಿ,ಉಯ್ಯಾಲೆ,ಅರಳು–ಮರಳು, ನಾಕುತಂತಿ,ಗರಿ, ಎಂಬ ಕೃತಿಗಳನ್ನು ಬರೆದಿರುವರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಮೊದಲಾದ ಪ್ರಶಸ್ತಿಗಳು ದೊರೆತಿವೆ.

## ಕುಮಾರವ್ಯಾಸ :

ಕುಮಾರವ್ಯಾಸ ಎಂದೇ ಪ್ರಸಿದ್ದರಾದ ಗದುಗಿನ ನಾರಾಣಪ್ಪ ಗದಗ ಪ್ರಾಂತದ ಕೋಳಿವಾಡದಲ್ಲಿ 1430 ರಲ್ಲಿ ಜನಿಸಿದನು. ಇವರು ಐರಾವತ, ಗದುಗಿನ ಭಾರತ,ಅಥವಾ ಕುಮಾರವ್ಯಾಸ ಭಾರತ ಎಂಬ ಪ್ರಸಿದ್ಧ ಕೃತಿಯನ್ನು ರಚಿದ್ದಾರೆ. ರೂಪಕ ಅಲಂಕಾರವನ್ನು ಹೆಚ್ಚು ಹೆಚ್ಚಾಗಿ ಬಳಸಿದ್ದರಿಂದ " ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದನ್ನು ಪಡೆದಿದ್ದಾರೆ.

## ಕುವೆಂಪು :

ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳ್ಳಿ ಎಂಬಲ್ಲಿ 1904 ರಂದು ಜನಿಸಿದರು.ಇವರು ಪಕ್ಷಿಕಾಶಿ, ಕೊಳಲು, ಕಾನೂರು ಹೆಗ್ಗಡತಿ, ಶ್ರೀ ರಾಮಾಯಣ ದರ್ಶನಂ, ಎಂಬ ಕೃತಿಗಳನ್ನು ಬರೆದಿರುವರು.ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ದೊರಕಿವೆ.

## ರನ್ನ :

ರನ್ನನು ಬಾಗಲಕೋಟೆ ಜಿಲ್ಲೆಯ ಮುದುವೊಳಲು ( ಈಗಿನ ಮುದೋಳ) ಎಂಬ ಗ್ರಾಮದಲ್ಲಿ ಕ್ರಿ. ಶ. ಸುಮಾರು 949 ರಲ್ಲಿ ಜನಿಸಿದನು. ಚಾಲುಕ್ಯರ ಆಸ್ಥಾನದಲ್ಲಿದ್ದ ಈತನು ಸಾಹಸಭೀಮವಿಜಯಂ(ಗದಾಯುದ್ಧ), ಪರುಶುರಾಮಚರಿತಂ,ರನ್ನಕಂದ, ಎಂಬ ಕೃತಿಗಳನ್ನು ಬರೆದಿದ್ದಾನೆ. ರನ್ನನಿಗೆ "ಕವಿ ಚಕ್ರವರ್ತಿ" ಎಂಬ ಬಿರುದನ್ನು ಚಾಲೂಕ್ಯರೆ ದೊರೆ ತೈಲಪನು ನೀಡಿದ್ದನು.

## ಲಕ್ಷ್ಮೀಶ :

ಲಕ್ಷ್ಮೀಶ ಕವಿಯು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಕ್ರಿ.ಶ 1550 ರಲ್ಲಿ ಜನಿಸಿದನು.'ಜೈಮಿನಿ ಭಾರತ' ಎಂಬ ಪ್ರಸಿದ್ಧ ಕಾವ್ಯವನ್ನು ಬರೆದಿರುವನು.ಲಕ್ಷ್ಮೀಶ ಕವಿಗೆ ಉಪಮಾಲೋಲ, ಕರ್ಣಾಟಕವಿಚೂತವನ ಚೈತ್ರ ಎಂಬ ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣ ಕಂಠಪಾಠಮಾಡಿ ಬರೆದು ಅಭ್ಯಾಸ ಮಾಡಿರಿ**

## ಸಂಕಲ್ಪಗೀತೆ

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

## ಹಕ್ಕಿ ಹಾರುತಿದೆ ನೋಡಿದಿರಾ

ನೀಲಮೇಘಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನುಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

## ಹಲಗಲಿ ಬೇಡರು

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

## ಹಸುರು

ಹಸುರಾಗ; ಸಹಸಿರು ಮುಗಿಲು
ಹಸುರು ಗದ್ದೆಯಾ ಬಯಲು
ಹಸುರಿನ ಮಲೆ; ಹಸುರು ಕಣಿವೆ
ಹಸುರು ಸಂಜಯೀ ಬಿಸಿಲೂ!

## ಕೌರವೇಂದ್ರನ ಕೊಂದೆನೀನು

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

## ಛಲಮನೆ ಮೞೆವೆಂ

ನೆಲಕಿೞಿವೆನೆಂದು ಬಗೆದಿರೆ।
ಚಲಕಿೞಿವೆಂ ಪಾಂಡುಸುತರೊಳೀನೆಲನಿದು ಪಾ ॥
ೞ್ನೆಲನೆನಗೆದಿನಪ ಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವಪನೆ

## ವೀರಲವ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆಬಿಲ್ದಿರುವನೇರಿಸಿತೀಡಿಜೇಗೈದುನಿಂತಿರ್ದನು

## ಪದ್ಯಗಳ ಮೌಲ್ಯಧಾರಿತ 'ಸಾರಾಂಶ' ವಾಕ್ಯ ರೂಪದಲ್ಲಿ ಬರೆಯುವುದು.

ಸರಳೀಕರಣದ ಸೂಚನೆಗಳು

*ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ 40 ಪದ್ಯದ ಮೌಲ್ಯಾಧಾರಿತ ಸಾರಾಂಶ ಬರೆಯುವುದು ಆಗಿರುತ್ತದೆ.

* 7 ಪದ್ಯಗಳ ಆಶಯ ಭಾವವನ್ನು ಕಂಠಪಾಠ ಮಾಡುವುದು / ರೂಢಿ ಮಾಡುವುದು.

* ಕಂಠಪಾಠ ಮಾಡಿದ ಅದೇ ಪದ್ಯದ ನುಡಿಯನ್ನು ಸರಳ ಗದ್ಯ ರೂಪದಲ್ಲಿ ಬರೆಯುವುದು.

* ಮಕ್ಕಳು ಸಾರಾಂಶ ಬರೆಯುವಾಗ ನೀಡಿದ ಪದ್ಯಗಳನ್ನು ಸರಳ ಗದ್ಯ ರೂಪದಲ್ಲಿ ಬರೆಯುವುದು.

* ಕಲಿತ ಕವಿಪರಿಚಯ ದಲ್ಲಿನ ಕವಿ ಪದ್ಯ ಆಯ್ದ ಕೃತಿಯನ್ನು ಆಯ್ಕೆಯಲ್ಲಿ ಬರೆಯುವುದು.

* ಪದ್ಯದ ಯಾವುದೇ ಖಂಡಿಕೆ ( ಪ್ಯಾರಾ ) ನೀಡಿದರು ಸಾಮಾನ್ಯವಾಗಿ ಕೆಳಗೆ ನೀಡಿದಂತೆ ಮೌಲ್ಯ ಬರೆಯುವುದು.

* ಕೆಳಗೆ ಬಳಸಿದ ಹಂತಗಳಿಗೆ ಅನುಗುಣವಾಗಿ ಬರೆಯುವುದು ಆಯ್ಕೆ , ಮೌಲ್ಯ , ಸಾರಾಂಶ.

**ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

### 1. ಸಂಕಲ್ಪ ಗೀತೆ

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಪ್ರಸ್ತುತ ಪದ್ಯವು ಜಿಎಸ್ ಶಿವರುದ್ರಪ್ಪ ಎಂದೇ ಪ್ರಸಿದ್ಧರಾದ ಡಾ.ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ನವರು ರಚಿಸಿದ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದು ಸಂಕಲ್ಪ ಗೀತೆ ಆರಿಸಲಾಗಿದೆ.

ಸಾರಾಂಶ : ಇಂದು ಜಗತ್ತಿನಲ್ಲಿ ಜಾತಿ–ಮತ–ಭಾಷೆ–ಬಣ್ಣಅಜ್ಞಾನ ಮೂಢನಂಬಿಕೆ ಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ ಆದುದರಿಂದ ಕತ್ತಲೆಯನ್ನು ಓಡಿಸಲು ಬೆಳಕಿನ ಅವಶ್ಯಕತೆ ಇದೆ ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ.ಅಂತಹ ಹಣತೆಯನ್ನು ಹಚ್ಚಿ ಬಿರುಗಾಳಿಗೆ ಸಿಕ್ಕು ಹೊಯ್ದಾಡುವ ಅಂತ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸಿ ದಡವನ್ನು ಸೇರಿಸೋಣ ಅಂದರೆ ಸಂಸಾರ ಸಾಗರದಲ್ಲಿ ಅಜ್ಞಾನದ ಬಿರುಗಾಳಿಗೆ ಹೊಯ್ದಾಡುತ್ತಾ ಎಚ್ಚರಿಕೆಯಿಂದ ನಡೆಸೋಣ ಎಂದು ಜಿಎಸ್ ಶಿವರುದ್ರಪ್ಪನವರು ಆಶಿಸುತ್ತಾರೆ.

ಮೌಲ್ಯ : ಜೀವನದಲ್ಲಿ ಧನಾತ್ಮಕ ಚಿಂತನೆ, ದೃಢ ಸಂಕಲ್ಪವನ್ನು ಹೊಂದಬೇಕು . ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದಿಂದ ಇರಬೇಕು.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯ ದೊಳು ಕಂದಿದ ಕಣ್ಣೊಳು
ನಾಳಿನ ಕನಸನ್ನು ಬಿತ್ತೋಣ.

ಪದ್ಯ: ಸಂಕಲ್ಪ ಗೀತೆ

ಕವಿ: ಜಿಎಸ್ ಶಿವರುದ್ರಪ್ಪ

ಆಯ್ಕೆ: ಎದೆ ತುಂಬಿ ಹಾಡಿದೆನು

ಸಾರಾಂಶ: ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ ಇಂತಹ ಮತಪಂಥಗಳು ಎಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ ಮುಕ್ತಿಯನ್ನು ನೀಡಬಲ್ಲ ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು.ಅಸಮಾನತೆ , ಭಯೋತ್ಪಾದನೆ, ಶೋಷಣೆ ಇತ್ಯಾದಿಗಳಿಂದ ಭಯಭೀತಗೊಂಡು ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು, ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ ಉತ್ತಮ ಕನಸನ್ನು ಅವರಲ್ಲಿ ಬಿತ್ತಿ ,ಧೈರ್ಯ ನೀಡಬೇಕೆಂದು ಜಿ ಎಸ್ ಶಿವರುದ್ರಪ್ಪನವರು ಹೇಳಿದ್ದಾರೆ.

ಮೌಲ್ಯ: ಜೀವನದಲ್ಲಿ ಧನಾತ್ಮಕ ಚಿಂತನೆ, ದೃಢ ಸಂಕಲ್ಪವನ್ನು ಹೊಂದಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದಿಂದ ಇರಬೇಕು.

## ಪದ್ಯದ ಆಯ್ಕೆ ಮತ್ತು ಪದ್ಯದಲ್ಲಿ ಅಡಕವಾಗಿರುವ ಮೌಲ್ಯಗಳು.

### ೧ ಸಂಕಲ್ಪಗೀತೆ

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು **'ಜಿ.ಎಸ್.ಶಿವರುದ್ರಪ್ಪನವರು'** ಬರೆದ **'ಎದೆತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಮೌಲ್ಯಗಳು :** ದೃಢಸಂಕಲ್ಪ, ಧನಾತ್ಮಕ ಮನೋಭಾವನೆ, ಆತ್ಮವಿಶ್ವಾಸ, ಸಾಮಾಜಿಕ ಹೊಣೆಗಾರಿಕೆ, ರಾಷ್ಟ್ರೀಯ ಭಾವೈಕ್ಯತ ಇತ್ಯಾದಿಗಳು.

### ೨ ಹಕ್ಕಿ ಹಾರುತಿದೆ ನೋಡಿದಿರಾ

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು **'ದ.ರಾ.ಬೇಂದ್ರೆ'**ಯವರು ಬರೆದಿರುವ **'ಗರಿ'** ಎಂಬ ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಮೌಲ್ಯಗಳು :** ಕಾಲದೊಂದಿಗೆ ಹೊಂದಾಣಿಕೆ, ವಿಧೇಯತೆ, ಜಾಗತಿಕ ಸತ್ಯ, ಸಮಯ ಪಾಲನೆ ಇತ್ಯಾದಿಗಳು.

### ೩ ಹಲಗಲಿ ಬೇಡರು

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು **'ಬಿ.ಎಸ್.ಗದ್ದಗಿಮಠ'**ರವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಎಂಬ ಕೃತಿಯಿಂದ ಆಯ್ದ **'ಹಲಗಲಿ ಬೇಡರ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಮೌಲ್ಯಗಳು :** ದೇಶ ಪ್ರೇಮ, ಸ್ವಾತಂತ್ರ ಪ್ರೇಮ, ಒಗ್ಗಟ್ಟು, ಜಾನಪದ ಸೊಗಡು.

### ೪ ಕೌರವೇಂದ್ರನ ಕೊಂದೆ ನೀನು

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು **'ಕುಮಾರವ್ಯಾಸ'**ನಿಂದರಚಿತವಾದ **'ಕರ್ನಾಟ ಭಾರತ ಕಥಾಮಂಜರಿ'** ಎಂಬ ಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

**ಮೌಲ್ಯಗಳು :** ಸ್ವಾಮಿನಿಷ್ಠೆ, ಸದ್ವರ್ತನೆ, ಗೆಳೆತನ, ಅನುಕಂಪ, ವಾತ್ಸಲ್ಯ, ಸಮಚಿತ್ತತ, ಕರ್ತವ್ಯ ನಿಷ್ಠ ಮುಂತಾದವುಗಳು.

### ೫ ಹಸುರು

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು ಕವಿ **'ಕುವೆಂಪು'**ರವರು ರಚಿಸಿರುವ **'ಪಕ್ಷಿಕಾಶಿ'** ಎಂಬ ಕವನ ಸಂಕಲನದಿಂದಆಯ್ದ 'ಹಸುರು' ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಮೌಲ್ಯಗಳು :** ಪ್ರಕೃತಿ ತನ್ಮಯ, ಅದ್ವೈತ ಸ್ಥಿತಿ, ಪರಿಸರ ಪ್ರೇಮ ಮುಂತಾದವುಗಳು.

**೬ ಛಲಮನೆ ಮಜವೆಂ**

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು ಮಹಾಕವಿ **'ರನ್ನ'**ನಿಂದರಚಿತವಾದ **'ಸಾಹಸ ಭೀಮ ವಿಜಯಂ'** ಎಂಬ ಮಹಾಕಾವ್ಯದಿಂದ ಆಯ್ದ **'ಛಲಮನೆ ಮೆರೆವೆಂ'** ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

**ಮೌಲ್ಯಗಳು** : ಛಲದಗುಣ, ಗೌರವ ಭಾವನೆ, ಮಿತ್ರಪ್ರೇಮ, ಸಹೋದರ ಪ್ರೇಮ,ಕರ್ತವ್ಯ ಪ್ರಜ್ಞೆ ಮುಂತಾದವುಗಳು

**೭ ವೀರಲವ**

**ಆಯ್ಕೆ :** ಈ ಮೇಲಿನ ಪದ್ಯಭಾಗವನ್ನು ಕವಿ **'ಲಕ್ಷ್ಮೀಶನು'** ಬರೆದ **'ಜೈಮಿನಿ ಭಾರತ'** ಎಂಬ ಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

**ಮೌಲ್ಯಗಳು :** ದುಷ್ಟ ಶಿಕ್ಷಣ–ಶಿಷ್ಯರಕ್ಷಣೆ, ಬಾಲ ಸಹಜ ಕುತೂಹಲ, ಸಹಜ ಕ್ಷಾತ್ರಗುಣ, ಮುಂತಾದವುಗಳು

## ಸಂದರ್ಭ ಮತ್ತು ಸ್ವಾರಸ್ಯಗಳು

**ಪ್ರಸ್ತುತ ಈ ವಾಕ್ಯವನ್ನು "ಸಾರಾ ಅಬೂಬಕ್ಕರ್" ಅವರು ಬರೆದ "ಚಪ್ಪಲಿಗಳು" ಕೃತಿಯಿಂದ ಆಯ್ದ "ಯುದ್ಧ" ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.**

೧. **"ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ".**

**ಯಾರು ಯಾರಿಗೆ:** ರಾಹಿಲನು ಮನೆಯವರಿಗೆ **ಸಂದರ್ಭ:**ಮಳೆಯಿಂದ ರಕ್ಷಣೆ ಪಡೆಯುವಾಗ

೨. **"ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."**

**ಯಾರು ಯಾರಿಗೆ:** ರಾಹಿಲನು ಮುದುಕಿಗೆ **ಸಂದರ್ಭ:** ಸೊಸೆಯು ಹೆರಿಗೆ ನೋವಿನಲ್ಲಿದ್ದಾಗ

೩. **"ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ" ಇವೆಯಲ್ಲ?"**

**ಯಾರು ಯಾರಿಗೆ:** ಮುದುಕಿ ತನ್ನಲ್ಲಿ ತಾನೆ **ಸಂದರ್ಭ:** ರಾಹಿಲನ ಮುಖವನ್ನು ದಿಟ್ಟಿಸಿ ನೋಡಿದಾಗ

೪. **"ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ಅದನ್ನೂ ನೋಡಿ!"**

**ಯಾರು ಯಾರಿಗೆ:** ಮುದುಕಿಯು ಸೈನಿಕರಿಗೆ **ಸಂದರ್ಭ:** ಶತ್ರುಗಳಿಗಾಗಿ ಹುಡುಕುತ್ತಾ ಬಂದಾಗ

**ಪ್ರಸ್ತುತ ಈ ವಾಕ್ಯವನ್ನು "ಪುತಿನ" ಅವರು ಬರೆದ "ಏಕಾಂಕ ನಾಟಕಗಳು" ಕೃತಿಯಿಂದ ಆಯ್ದ "ಶಬರಿ" ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.**

೧. **"ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."**

**ಯಾರು ಯಾರಿಗೆ:** ರಾಮನು ಲಕ್ಷ್ಮಣನಿಗೆ **ಸಂದರ್ಭ:** ಮತಂಗಾಶ್ರಮದಲ್ಲಿ ಶಬರಿಯನ್ನು ನೋಡಿದಾಗ

೨. **"ನಾಚುತಿಹೆನೀ ಪೂಜ್ಯೆಯಿ ನಲುಮೆಯಿಂದ."**

**ಯಾರು ಯಾರಿಗೆ:** ರಾಮನು ಲಕ್ಷ್ಮಣನಿಗೆ **ಸಂದರ್ಭ:** ಶಬರಿಯ ಭಕ್ತಿ ಭಾವ ಕಂಡಾಗ

೩. **"ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"**

**ಯಾರು ಯಾರಿಗೆ:** ರಾಮನು ಶಬರಿಗೆ **ಸಂದರ್ಭ:** ಆಶ್ರಮದಲ್ಲಿ ಆಶ್ರಯ ಬಯಸಿದಾಗ

೪. **"ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ."**

**ಯಾರು ಯಾರಿಗೆ:** ಶಬರಿ ರಾಮನನ್ನು ಉದ್ದೇಶಿಸಿ **ಸಂದರ್ಭ:** ಶಬರಿಯು ರಾಮನ ಬಗ್ಗೆ ಹೇಳುವಾಗ

೫. **"ಬೆಳಕಿಗೊಲಿದವರ್ ಉರಿವ ಬತ್ತಿಯ ಕಿರುಕ ಕಾಣರು."**

**ಯಾರು ಯಾರಿಗೆ:** ರಾಮನು ಲಕ್ಷ್ಮಣನಿಗೆ **ಸಂದರ್ಭ:** ಶಬರಿಯ ಉಪಚಾರವನ್ನು ನೆನೆಯುವಾಗ

**ಪ್ರಸ್ತುತ ಈ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡ ಅವರು ಬರೆದ "ದಿವಾನ್ ಸರ್ಎಮ್ ವಿಶ್ವೇಶ್ವರಯ್ಯನವರು ಕಾರ್ಯಸಾಧನೆಗಳು" ಕೃತಿಯಿಂದ ಆಯ್ದ "ಭಾಗ್ಯಶಿಲ್ಪಿಗಳು" ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.**

೧. **"ಸಾಮಾಜಿಕ ಕಾನೂನುಗಳ ಹರಿಕಾರ."**

**ಯಾರು ಯಾರಿಗೆ:**ಲೇಖಕರು ಓದುಗರಿಗೆ **ಸಂದರ್ಭ:**ನಾಲ್ವಡಿ ಕೃಷ್ಣರಾಜರ ಕಾರ್ಯ ಸಾಧನೆ ತಿಳಿಸುವಾಗ

೨. **"ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."**

**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ವಿಶ್ವೇಶ್ವರಯ್ಯನವರ ಸಾಧನೆ ವರ್ಣಿಸುವಾಗ

೩. **"ಮೈಸೂರು ಸಂಸ್ಥಾನಕ್ಕೆ ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."**

**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ವಿಶ್ವೇಶ್ವರಯ್ಯನವರು ದಿವಾನರಾದಾಗ

೪. **"ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"**

**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ನಾಲ್ವಡಿ ಕೃಷ್ಣರಾಜ ಒಡೆಯರು ಸ್ತ್ರೀ ಪರ ಕಾಳಜಿ ತಿಳಿಸುವಾಗ

೫. **"ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."**
**ಯಾರು ಯಾರಿಗೆ:**ನೆಹರು ಅವರು ಸರ್.ಎಂ. ವಿಶ್ವೇಶ್ವರಯ್ಯ ರವರಿಗೆ
**ಸಂದರ್ಭ:** ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಮಾರಂಭದಲ್ಲಿ ಭಾಷಣ ಮಾಡುವಾಗ
**ಪ್ರಸ್ತುತ ಈ ವಾಕ್ಯವನ್ನು "ಎದೆಗೆ ಬಿದ್ದ ಅಕ್ಷರ" ಅವರು ಬರೆದ ದೇವನೂರುಮಹಾದೇವ ಕೃತಿಯಿಂದ ಆಯ್ದ "ಎದೆಗೆ ಬಿದ್ದ ಅಕ್ಷರ" ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.**

೧. **"ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."**
**ಯಾರು ಯಾರಿಗೆ:** ಮನೆಮಂಚಮ್ಮ ಗ್ರಾಮದವರಿಗೆ
**ಸಂದರ್ಭ:** ಸಿದ್ಧಲಿಂಗಯ್ಯನವರು ಕತೆ ಹೇಳುವಾಗ ದೇವರು ಒಡಮೋಡು ಬಗ್ಗೆ ಸಿದ್ಧಲಿಂಗಯ್ಯನವರು ಹೇಳಿದ ಕತೆಯನ್ನು ಲೇಖಕರು ಹೇಳುವಾಗ

೨. **"ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ಪೈಯವರ ಸಂಶೋಧನಾ ಸತ್ಯವನ್ನು ಲೇಖಕರು ತಿಳಿಸುವಾಗ

೩. **"ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ವಚನಕಾರರ ದೇವರ ಬಗ್ಗೆ ಹೇಳುವಾಗ

೪. **"ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:**ಬುದ್ಧನಲ್ಲಿದ್ದ ಕಾರುಣ್ಯತೆ, ಅನುಕಂಪ ವಿವರಿಸುವಾಗ

**ಪ್ರಸ್ತುತ ಈ ವಾಕ್ಯವನ್ನು "ಎ.ಎನ್.ಮೂರ್ತಿರಾವ್" ಅವರು ಬರೆದ "ಸಮಗ್ರ ಲಲಿತ ಪ್ರಬಂಧ" ಕೃತಿಯಿಂದ ಆಯ್ದ "ವ್ಯಾಘ್ರಗೀತೆ"ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.**

೧. **"ಖಂಡವಿದೆಕೋ ಮಾಂಸವಿದೆಕೊ, ಗುಂಡಿಗೆಯ ಬಿಸಿರಕ್ತವಿದೆಕೊ."**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ಪುಣ್ಯಕೋಟಿಯನ್ನು ಪರಿಚಯಿಸುವಾಗ

೨. **"ಸ್ವಧರ್ಮೆ ನಿಧನಂ ಶ್ರೇಯಃ"**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ಭಗವದ್ಗೀತೆಯ ಸಾಲು ನೆನೆಯುವಾಗ

೩. **"ದೇವರೇ ಮರ ಹತ್ತುವಷ್ಟು ಅವಕಾಶ ಕರುಣಿಸು."**
**ಯಾರು ಯಾರಿಗೆ:** ಲೇಖಕರು ಓದುಗರಿಗೆ **ಸಂದರ್ಭ:** ಹುಲಿಯಿಂದ ರಕ್ಷಿಸಿಕೊಳ್ಳುವ ಸಂದರ್ಭದಲ್ಲಿ

೪. **"ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"**
**ಯಾರು ಯಾರಿಗೆ:** ಶಾನುಭೋಗರು ರೈತರಿಗೆ **ಸಂದರ್ಭ:** ಧರ್ಮಕ್ಕನುಸಾರ ಹುಲಿ ತಿನ್ನದೆ ಹೋದಾಗ

೫. **"ಹುಲಿ ಈಗ ಎಷ್ಟು ಹಸಿದಿರಬೇಕು"**
**ಯಾರು ಯಾರಿಗೆ:** ಶಾನುಬೋಗರು ಯೋಚಿಸುತ್ತಾ **ಸಂದರ್ಭ:** ಊಟಕ್ಕೆ ಕುಳಿತು ಹುಲಿಯ ಹಸಿಯು ನೆನೆದಾಗ.

**ಪ್ರಸ್ತುತ ಈ ವಾಕ್ಯವನ್ನು** ದುರ್ಗಸಿಂಹ **ಅವರು ಬರೆದ** "ಕರ್ನಾಟಕ ಪಂಚತಂತ್ರ"**ಕೃತಿಯಿಂದ ಆಯ್ದ** "ವೃಕ್ಷಸಾಕ್ಷಿ" **ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.** "

೧. "**ಪೊನ್ನನೆಲ್ಲಮಂ ನೀನೆ ಕೊಂಡೆ."**
**ಯಾರು ಯಾರಿಗೆ:** ದುಷ್ಟಬುದ್ಧಿಯು ಧರ್ಮಬುದ್ಧಿಗೆ **ಸಂದರ್ಭ:** ಕಳ್ಳತನ ಮರೆಮಾಚುವ ಸಂದರ್ಭದಲ್ಲಿ

೨. **"ಈತನ ಮಾತು ಅಶ್ರುತ ಪೂರ್ವಂ"**
**ಯಾರು ಯಾರಿಗೆ:** ಧರ್ಮಾಧಿಕಾರಣರು ವ್ಯಾಪಾರಿಗಳಿಗೆ **ಸಂದರ್ಭ:** ಕಳ್ಳತನಕ್ಕೆ ವೃಕ್ಷವೇ ಸಾಕ್ಷಿ ಎಂದು ಹೇಳಿದಾಗ

- "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟ್ಟಿವ ಬಗೆ."

**ಯಾರು ಯಾರಿಗೆ:** ಪ್ರೇಮ ಮತಿ ದುಷ್ಟಬುದ್ಧಿಗೆ **ಸಂದರ್ಭ:** ಪ್ರಕೃತಿ ವಿರುದ್ಧದ ಸ್ಥಿತಿಯನ್ನು ತಿಳಿಸುವಾಗ

೪. **"ಹುಸಿಯದ ಬೇಹಾರಿಯೇ ಇಲ್ಲ."**
**ಯಾರು ಯಾರಿಗೆ:** ಧರ್ಮಬುದ್ಧಿಯು ಸೇರಿದ ಜನ ಸಮೂಹಕ್ಕೆ **ಸಂದರ್ಭ:** ಪೊಟರೆಯ ರಹಸ್ಯ ಗ್ರಹಿಸಿ ಊಹಿಸಿದಾಗ

**ಪ್ರಸ್ತುತ ಈ ವಾಕ್ಯವನ್ನು** ಜಿ.ಎಸ್.ಶಿವರುದ್ರಪ್ಪ **ಅವರು ಬರೆದ "**ಎದೆತುಂಬಿ ಹಾಡಿದೆನು**" ಕೃತಿಯಿಂದ ಆಯ್ದ** "ಸಂಕಲ್ಪಗೀತೆ" **ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ಪ್ರೀತಿಯ ಹಣತೆಯ ಹಚ್ಚೋಣ"**

**ಯಾರು ಯಾರಿಗೆ:**ಓದುಗರಿಗೆ ಕವಿಯ ಕರೆ **ಸಂದರ್ಭ:** ಸಮಾಜದ ಅಜ್ಞಾನ, ದ್ವೇಷ ನಿವಾರಿಸಬೇಕೆನ್ನುವಾಗ

೨. **"ಮುಂಗಾರಿನ ಮಳೆಯಾಗೋಣ."**

**ಯಾರು ಯಾರಿಗೆ:** ಓದುಗರಿಗೆ ಕವಿಯ ಕರೆ **ಸಂದರ್ಭ:** ಬರಡಾದ ಭೂಮಿಯನ್ನು ಹಸಿರಾಗಿಸಬೇಕೆನ್ನುವಾಗ

೩. **"ಹೊಸ ಭರವಸೆಗಳ ಕಟ್ಟೋಣ."**

**ಯಾರು ಯಾರಿಗೆ:** ಓದುಗರಿಗೆ ಕವಿಯ ಕರೆ **ಸಂದರ್ಭ:** ಬದುಕಿಗೆ ಭರವಸೆಗಳನ್ನು ಮೂಡಿಸಬೇಕೆನ್ನುವಾಗ

೪. **"ಹೊಸ ಎಚ್ಚರದೊಳು ಬದುಕೋಣ"**

**ಯಾರು ಯಾರಿಗೆ:** ಓದುಗರಿಗೆ ಕವಿಯ ಕರೆ **ಸಂದರ್ಭ:** ಸಾಮರಸ್ಯದ ಅಗತ್ಯವನ್ನು ವಿವರಿಸುವಾಗ

**ಪ್ರಸ್ತುತ ಈ ವಾಕ್ಯವನ್ನು ಬೇಂದ್ರ ಅವರು ಬರೆದ "ಗರಿ" ಕೃತಿಯಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ" ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ರೆಕ್ಕೆಗಳೆರಡೂ ಪಕ್ಕದಲ್ಲುಂಟು."**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಕಾಲದ ಹಕ್ಕಿಯು ಸ್ವಾಧೀನಪಡಿಸಿಕೊಂಡದನ್ನು ತಿಳಿಸುವಾಗ

೨. **"ಸಾರ್ವಭೌಮರಾ ನೆತ್ತಿಯ ಕುಕ್ಕಿ."**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಸಾರ್ವಭೌಮರನ್ನೂ ಮೆಟ್ಟಿನಿಂತ ಪರಿಯನ್ನು ತಿಳಿಸುವಾಗ

೩. **''ಬಲ್ಲರುಯಾರಾ ಹಾಕಿದ ಹೊಂಚ,"**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಕಾಲಪಕ್ಷಿಯ ಮನೋಗತ ಅರಿತವರಾರು ಎನ್ನುವಾಗ

೪. **"ಹೊಸಗಾಲದ ಹಸು ಮಕ್ಕಳ ಹರಸಿ."**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಬದಲಾವಣೆಗೆ ಚೈತನ್ಯಗೊಳಿಸಿದ ಹಕ್ಕಿಯ ಬಗ್ಗೆ ಹೇಳುವಾಗ

೫. **"ಮಂಗಳ ಲೋಕದ ಅಂಗಳಕೇರಿ."**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಶೋಧದಿಂದ ಮಂಗಳ ಲೋಕಕ್ಕೆ ಲಗ್ಗೆ ಇಟ್ಟಿದನ್ನು ತಿಳಿಸುವಾಗ

**ಪ್ರಸ್ತುತ ಈ ವಾಕ್ಯವನ್ನು "ಬಿ.ಎಸ್.ಗದ್ದಗಿಮಠ" ಅವರು ಸಂಪಾದಿಸಿದ "ಕನ್ನಡ ಜನಪದ ಗೀತೆಗಳು" ಕೃತಿಯಿಂದ ಆಯ್ದ "ಹಲಗಲಿ ಬೇಡರು" ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"**

**ಯಾರು ಯಾರಿಗೆ:** ಬ್ರಿಟಿಷ್ ಅಧಿಕಾರಿಗಳು ಹೇಳುತ್ತಾರೆ

**ಸಂದರ್ಭ**: ನಿಶ್ಶಸ್ತ್ರೀಕರಣದ ನಿಯಮದ ಅನುಸಾರ ಆಯುಧಗಳನ್ನು ಕಸಿದುಕೊಳ್ಳುವಾಗ

೨. **"ಜೀವ ಸತ್ತು ಹೋಗುವುದು ಗೊತ್ತ."**

**ಯಾರು ಯಾರಿಗೆ:** ನಾಯಕರು ಜನರಿಗೆ **ಸಂದರ್ಭ:** ಜೀವಕ್ಕಿಂತ ಹೆಚ್ಚಾದ ಆಯುಧ ಕೊಡಬಾರದು ಎನ್ನುವಾಗ

೩. **"ಹೊಡೆದರೆ ಗುಂಡ ಕರುಣ ಇಲ್ಲದ್ದಂಗ."**

**ಯಾರು ಯಾರಿಗೆ:** ಲಾವಣಿಕಾರರು ಓದುಗರಿಗೆ **ಸಂದರ್ಭ:** ಬ್ರಿಟಿಷ್ ಸರಕಾರದ ದೌರ್ಜನ್ಯ ಕುರಿತು ವರ್ಣಿಸುವಾಗ

೪. **"ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು."**

**ಯಾರು ಯಾರಿಗೆ:** ಲಾವಣಿಕಾರರು ಕೇಳುಗರಿಗೆ **ಸಂದರ್ಭ:** ಹಲಗಲಿ ಬೇಡರ ದಂಗೆಯ ಪರಿಣಾಮ ಬಣ್ಣಿಸುವಾಗ

**ಪ್ರಸ್ತುತ ಈ ವಾಕ್ಯವನ್ನು ಕುಮಾರವ್ಯಾಸ ಬರೆದ "ಗದುಗಿನ ಭಾರತ" ಕೃತಿಯಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ರವಿಸುತನ ಕಿವಿಯಲಿ ಬಿತ್ತಿದನು ಭಯವ."**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಕರ್ಣನಿಗೆ ಅವನ ಜನ್ಮ ರಹಸ್ಯ ಹೇಳುವಾಗ

೨. **"ಬಾಯ್ದಂಬುಲಕೆ ಕೈಯಾನುವರೆ."**

**ಯಾರು ಯಾರಿಗೆ:** ಕೃಷ್ಣನು ಕರ್ಣನಿಗೆ **ಸಂದರ್ಭ:** ಆತ್ಮಾಭಿಮಾನವನ್ನು ಕೆರಳಿಸುವಾಗ

೩. **"ಜೀಯ ಹಸಾದವೆಂಬುದು ಕಷ್ಟ"**

**ಯಾರು ಯಾರಿಗೆ:** ಕೃಷ್ಣನು ಕರ್ಣನಿಗೆ **ಸಂದರ್ಭ:** ಅರಸನಾಗುವಂತೆ ಸ್ವಾಭಿಮಾನ ಕುರಿತು ತಿಳಿಸುವಾಗ

೪. **"ನಿನ್ನಪದೆಸೆಯ ಬಯಸುವನಲ್ಲ."**

**ಯಾರು ಯಾರಿಗೆ:** ಕೃಷ್ಣನು ಕರ್ಣನಿಗೆ **ಸಂದರ್ಭ:** ಕರ್ಣನು ವ್ಯಾಕುಲತೆಗೆ ಒಳಗಾದಾಗ

೫. **"ಮಾರಿಗೌತಣವಾಯ್ತು ನಾಳಿನ ಭಾರತವು."**

**ಯಾರು ಯಾರಿಗೆ:** ಕರ್ಣ ಕೃಷ್ಣನಿಗೆ **ಸಂದರ್ಭ:** ಕರ್ಣನು ಒಡೆಯನ ಪರವಾಗಿ ಹೋರಾಡುತ್ತೇನೆ ಎನ್ನುವಾಗ

**ಪ್ರಸ್ತುತ ಈ ವಾಕ್ಯವನ್ನು 'ಕುವೆಂಪು' ಅವರು ಬರೆದ "ಪಕ್ಷಿಕಾಶಿ" ಕೃತಿಯಿಂದ ಆಯ್ದ "ಹಸುರು" ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ಹಸುರಾದುದು ಕವಿಯಾತ್ಮಂ."**

**ಯಾರು ಯಾರಿಗೆ:** ಕವಿಯು ಸಹೃದಯರಿಗೆ **ಸಂದರ್ಭ:** ಪ್ರಕೃತಿಯ ಹೆಸರಿನಿಂದ ಕವಿಯ ಆತ್ಮ ತಲ್ಲೀನಗೊಂಡಾಗ

೨. **"ಬೇರೆ ಬಣ್ಣವನ ಕಾಣೆ"**

**ಯಾರು ಯಾರಿಗೆ:** ಕವಿಯು ಸಹೃದಯರಿಗೆ **ಸಂದರ್ಭ:** ಮಲೆನಾಡಿನ ಪ್ರಕೃತಿಯ ಹಸುರಿನ ರೀತಿ ತಿಳಿಸುವಾಗ

೩. **"ಹಸುರು ಹಸುರಿಳೆಯುಸಿರೂ".**

**ಯಾರು ಯಾರಿಗೆ:** ಕವಿಯು ಸಹೃದಯರಿಗೆ **ಸಂದರ್ಭ:** ಹಸುರಿನ ರಸಾಸ್ವಾಧಗೈಯುತ್ತಾ ಉಸಿರಿನಂತಾದಾಗ

೪. **"ಹಸುರತ್ತಲ್, ಹಸುರಿತ್ತಲ್, ಹಸುರೆಲ್."**

**ಯಾರು ಯಾರಿಗೆ:** ಕವಿಯು ಸಹೃದಯರಿಗೆ **ಸಂದರ್ಭ:** ನೋಡಿದಲ್ಲೆಲ್ಲಾ ಕಾಣುವ ಹಸುರನ್ನು ಬಣ್ಣಿಸುವಾಗ

**ಪ್ರಸ್ತುತ ಈ ವಾಕ್ಯವನ್ನು "ರನ್ನ" ಬರೆದ "ಸಾಹಸ ಭೀಮ ವಿಜಯಂ" ಕೃತಿಯಿಂದ ಆಯ್ದ "ಛಲಮನೆ ಮೆಱೆವೆಂ" ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ"**

**ಯಾರು ಯಾರಿಗೆ:** ದುರ್ಯೋಧನ ಭೀಷ್ಮನಿಗೆ **ಸಂದರ್ಭ:** ಸಂಧಿಗೊಪ್ಪುವಂತೆ ಭೀಷ್ಮರು ಸಲಹೆ ನೀಡಿದಾಗ.

೨. **"ಸಮರದೊಳೆನಗಜ್ಜ ಪೇೞಿಮಾವುದುಕಜ್ಜಂ."**

**ಯಾರು ಯಾರಿಗೆ:** ದುರ್ಯೋಧನ ಭೀಷ್ಮನಿಗೆ
**ಸಂದರ್ಭ:** ತಾನು ಬಂದದ್ದು ಸಂಧಿ ಮಾಡಿಸು ಎಂದು ಹೇಳುವದಕ್ಕಲ್ಲಾ ಎನ್ನುವಾಗ

೩. **"ಪಾಂಡವರೊೞಿಱಿದು ಛಲಮನೆ ಮೆರೆವೆಂ."**

**ಯಾರು ಯಾರಿಗೆ:** ದುರ್ಯೋಧನ ಭೀಷ್ಮನಿಗೆ **ಸಂದರ್ಭ:** ಯುದ್ಧಕ್ಕಾಗಿಯೇ ತನ್ನ ನಿಲುವನ್ನು ಸಮರ್ಪಿಸುವಾಗ

೪. **"ಮೇಣಾಯ್ತು ಕೌರವಂಗವನಿತಳಂ."**

**ಯಾರು ಯಾರಿಗೆ:** ದುರ್ಯೋಧನ ಭೀಷ್ಮನಿಗೆ **ಸಂದರ್ಭ:** ಬಂದದ್ದನ್ನು ಎದುರಿಸಬೇಕೆನ್ನುತ್ತಾ ತಿರ್ಮಾನಿಸುವಾಗ

**ಪ್ರಸ್ತುತ ಈ ವಾಕ್ಯವನ್ನು ಲಕ್ಷ್ಮೀಶ** ಬರೆದ **"ಜೈಮಿನಿ ಭಾರತ" ಕೃತಿಯಿಂದ ಆಯ್ದ "ವೀರಲವ"ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.**

೧. **"ರಘುದ್ವಹನ ಸೊಲ್ಗೋೞಿ ನಮಿಸಲ್".**

**ಯಾರು ಯಾರಿಗೆ:** ಕವಿಯು ಓದುಗರಿಗೆ **ಸಂದರ್ಭ:** ಶ್ರೀರಾಮನ ಬಗೆಗಿನ ಭಕ್ತಿ ಗೌರವವನ್ನು ವಿವರಿಸುವಾಗ

೨. **"ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ."**

**ಯಾರು ಯಾರಿಗೆ:** ಲವನು ತನ್ನ ಮನಸ್ಸಿನಲ್ಲಿಯೇ **ಸಂದರ್ಭ:** ಶ್ರೀರಾಮನ ಗರ್ವ ಮುರಿಯಲು ನಿರ್ಧರಿಸಿದಾಗ

೩. **"ಅರಸುಗಳ ವಾಜಿಯಂ ಬಿಡು"**

**ಯಾರು ಯಾರಿಗೆ:** ಮುನಿಸುತರು ಲವನಿಗೆ **ಸಂದರ್ಭ:** ಕುದುರೆ ಕಟ್ಟಿದರೆ ಆಗುವ ಪರಿಣಾಮವನ್ನು ತಿಳಿಸುವಾಗ

೪. **"ಜಾನಕಿಯ ಮಗನಿದಕೆ ಬೆದರುವನೆ."**

**ಯಾರು ಯಾರಿಗೆ:** ಲವನು ಮುನಿಸುತರಿಗೆ **ಸಂದರ್ಭ:** ತನ್ನ ಶೌರ್ಯದ ಕುರಿತಾಗಿ ರಾಮನಿಗು ಹೆದರದಿದ್ದಾಗ

## ಗಾದೆಮಾತುಗಳನ್ನು ಅಭ್ಯಾಸ ಮಾಡಿರಿ

**೧.ತಾಳಿದವನು ಬಾಳಿಯಾನು.**

ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. **ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.** ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ, ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ತಾಳುವಿಕೆಗಿಂತ ತಪವು ಇಲ್ಲ ಎಂದಿದ್ದಾರೆ ಕನಕದಾಸರು.ಗಿಡ ನೆಟ್ಟ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ.ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು.ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ

ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅದನ್ನು ತಿಳಿದುಕೊಂಡು ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ, ತಾಳ್ಮೆಯಿಂದ ಯಾವುದೇ ಕಾರ್ಯ ಮಾಡಿದರೂ ಕಾರ್ಯ ಕಾರ್ಯಸಾಧನೆಯಾಗುತ್ತದೆ. ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ಆದ್ದರಿಂದ ನಾವು ತಾಳ್ಮೆಯಿಂದ ಸಹನೆಯಿಂದ ಜೀವನದಲ್ಲಿ ನಿರ್ಧಾರಗಳನ್ನು ತೆಗೆದುಕೊಂಡು ಮಾಡಿದರೆ ಯಶಸ್ವಿಯಾಗುತ್ತೇವೆ ಎಂಬುದೆ ಈ ಗಾದೆಯ ಅರ್ಥವಾಗಿದೆ.

**೨. ಮನಸಿದ್ದರೆ ಮಾರ್ಗ.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ಕನ್ನಡದ ಕಣ್ಮಣಿ ರಾಜಕುಮಾರರು ಹಾಡಿರುವಂತೆ ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ, ಮನಸೊಂದಿದ್ದರೆ ಮಾರ್ಗವುಂಟು ಕೆಚ್ಚೆದೆಯಿರಬೇಕೆಂದು ಹೇಳಿರುವ ಮಾತಿನಂತೆ ಯಾವುದೇ ಕಾರ್ಯ ಸಾಧನೆಯನ್ನು ಸಾಧಿಸಬೇಕಾದರೂ ಮನಸ್ಸಿನ ಸಿದ್ಧತೆ ಮಾಡಿಕೊಳ್ಳಬೇಕು.ಸಾಧಿಸಿಯೇ ತೀರುತ್ತೇನೆಂಬ ಛಲವಿರಬೇಕು.ಯಾವುದೇ ಗುರಿ ಸಾಧಿಸುವಾಗ ಅಸಾಧ್ಯವಾಗದ ಕಾರ್ಯ ಸಾಧ್ಯ ಎಂದು ತೋರಿಸಬಹುದು.ಆದರೆ ಅದು ಪ್ರಯತ್ನ ಮತ್ತು ಮನಸ್ಸಿನ ಛಲದಿಂದ ಪ್ರಯತ್ನಿಸಿದಾಗ ಮಾತ್ರ.ನಾವು ಅಪಾಯದಲ್ಲಿ ಸಿಲುಕಿದಾಗ ಮನಸ್ಸಿನ ಹತೋಟಿಯಲ್ಲಿ ಇಟ್ಟುಕೊಂಡು ಯೋಚಿಸಿದರೆ ಅದರಿಂದ ಹೊರಬರುವ ಮಾರ್ಗ ತಾನೇ ತಾನಾಗಿ ಗೋಚರವಾಗುತ್ತದೆ.ಸಾಧಿಸುವ ಛಲವೊಂದಿದ್ದರೆ ಸಾಕು, ಸಾಧನೆಗೈದ ವ್ಯಕ್ತಿಗಳ ಸಾಲಿನಲ್ಲಿ ನಾವು ಸೇರಬಹುದು. ಉದಾ: ಸ್ವಾಮಿ ವಿವೇಕಾನಂದರು ಭಾರತೀಯರ ಸಂಸ್ಕೃತಿಯನ್ನು ಜಗತ್ತಿಗೆ ಬಿತ್ತರಿಸುವ ಮನಸ್ಸು ಮಾಡಿದ್ದರಿಂದ ಜಗತ್ ಪ್ರಸಿದ್ದ ಜ್ಯೋತಿಯಾಗಿ ಬೆಳಗಿದರು. ಎಲ್ಲಾ ಕಾರ್ಯ ಸಾಧನೆಗೆ ಮನಸ್ಸೇ ಕಾರಣ ಎಂಬುದು ಈ ಮಾತಿನ ಅರ್ಥ.

**೩. ಕೈ ಕೆಸರಾದರೆ ಬಾಯಿ ಮೊಸರು.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಉಕ್ತಿಯಂತೆ ನಾವು ನಮ್ಮ ಕೆಲಸದಲ್ಲಿ ಸ್ವರ್ಗ ಸುಖವನ್ನು ಕಾಣಬೇಕು.ಇಲ್ಲಿ ಕೈ ಕೆಸರಾಗುವುದೆಂದರೆ ಕಷ್ಟಪಟ್ಟು ದುಡಿಯುವುದು, ಕಷ್ಟ ಪಟ್ಟು ದುಡಿಯುವುದರಿಂದ ಬಂದ ಸಂಪತ್ತಿನಿಂದ ಸುಖವನ್ನು ಅನುಭವಿಸುವುದಕ್ಕೆ ಬಾಯಿ ಮೊಸರಾಗುವುದೆಂದರ್ಥ.ಜನರು ಯಾವಾಗಲು ಶ್ರಮಜೀವಿಗಳಾಗಿ ಕಷ್ಟಪಟ್ಟು ದುಡಿದು ಉಣ್ಣಬೇಕು. ಅದನ್ನು ಬಿಟ್ಟು ಯಾರಾದರೂ ದುಡಿದಿದ್ದರ ಮೇಲೆ ಅಥವಾ ಪಿತ್ರಾರ್ಜಿತ ಆಸ್ತಿ ಇದೆಯೆಂದು ದುಡಿಯದೇ ಕುಳಿತು ಉಂಡರೆ ಸಾಲದು, ಕೂಡಿಟ್ಟ ಹಣ, ಕಟ್ಟಿಟ್ಟ ಬುತ್ತಿ ಎಲ್ಲಿಯವರೆಗೆ ಬರಲು ಸಾಧ್ಯ. ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು ಆದ್ದರಿಂದ ನಾವು

ದುಡಿಮೆಯೇ ದುಡ್ಡಿನ ತಾಯಿ ಎಂದು ತಿಳಿದು ಸ್ವಂತ ಕಾರ್ಯದಿಂದ ಸಂಪಾದಿಸಿದ ಸಂಪತ್ತಿನಲ್ಲಿ ನಾವು ಸ್ವರ್ಗ ಸುಖವನ್ನು ಪಡೆಯಬೇಕು, ಬೇರೆಯವರು ನೀಡಿದ ನೂರು ರೂಪಾಯಿಗಳಿಗಿಂತಲೂ ನಾವು ಸಂಪಾದಿಸಿದ ಒಂದು ರೂಪಾಯಿ ಶ್ರೇಷ್ಠ ಎಂಬಂತೆ ನಾವು ಸ್ವಂತ ದುಡಿದು ಸಂಪಾದಿಸಿದ ಸಂಪತ್ತಿನಿಂದ ಊಟಮಾಡಿದರೆ ಆ ತೃಪ್ತಿಯ ಸಂತೋಷವೇ ಸ್ವರ್ಗ ಎಂದು ಈ ಗಾದೆ ತಿಳಿಸುತ್ತದೆ.

**೪. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ಕಟ್ಟುವುದು ಕಠಿಣ: ಕೆಡಿಸುವುದು ಸುಲಭ ಮಾತಿನಂತೆ ನಾವು ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. ಒಬ್ಬ ಕುಂಬಾರ ಮಡಿಕೆಗಳನ್ನು ಮಾಡಲು ಮಣ್ಣು ತಂದು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು.ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ.ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳು ನಿರ್ಮಿಸಿದರು.ಆದರೆ ವಿದೇಶಿಯ ಆಕ್ರಮಣಕಾರರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು ನಿರ್ಮಿಸಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ, ಒಂದೇ ಒಂದು ಕೆಟ್ಟ ಕಾರ್ಯ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ ?ಆದ್ದರಿಂದ ಮಾನವ ತನ್ನ ಘನತೆಯನ್ನು ಅರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆ ಮಾತಿನ ಮಹತ್ವವಾಗಿದೆ.

**೫. ಮಾಡಿದ್ದುಣ್ಣೋ ಮಹಾರಾಯ**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

"ಕರ್ಮಣ್ಯ ವಾದಿಕಾರಸ್ತೆ ಮಾಫಲೇಸು ಕದಾಚನ: ಲೋಕ"ದಂತೆ ಎಂಬ ಭಗವದ್ಗೀತೆ ಶ್ಲೋಕದಂತೆ ಯಾರು ಎಂತಹ ಕಾರ್ಯಗಳನ್ನು ಮಾಡುತ್ತಾರೆಯೋ ಅಂತಹ ಪ್ರತಿಫಲ ಅನುಭವಿಸುತ್ತಾರೆ. ನಾವು ಮಾಡಿದ ಕಾರ್ಯಗಳಿಗೆ ಅನುಗುಣವಾಗಿ ಪ್ರತಿಫಲ ದೊರೆಯುತ್ತದೆ.ಆಳಾಗಿ ದುಡಿದು ಸಂಪತ್ತುನ್ನು ಅರಸನ ಹಾಗೇ ಅನುಭವಿಸಬಹುದು.ನಾವು ಒಳ್ಳೆಯ ಕಾರ್ಯ ಮಾಡಿದರೆ ಒಳ್ಳೆಯ ಪ್ರತಿಫಲ ಜೀವನದಲ್ಲಿ ಸಿಗುತ್ತದೆ. ಉದಾ: ಒಬ್ಬ ಮಗ ತನ್ನ ತಂದೆತಾಯಿಗಳಿಗೆ ಬೇರೆ ಊಟದ ಕೋಣೆ, ತಟ್ಟೆ, ಹಾಸಿಗೆಗಳನ್ನು ಮಾಡಿ ಕೆಟ್ಟದಾಗಿ ನೋಡಿಕೊಳ್ಳುತ್ತಿದ್ದನು. ಆ ತಂದೆ-ತಾಯಿಗಳು ತೀರಿಕೊಂಡ ಮೇಲೆ ಅವನ ಮಗ ತಂದೆಗೆ ಹೇಳಿದ.ಆ ಹಾಸಿಗೆ ತಟ್ಟೆಗಳನ್ನು ಎಸೆಯಬೇಡಿ ಅವುಗಳನ್ನೇ ನಿಮಗೂ ಉಪಯೋಗಿಸುತ್ತೇನೆ ಎಂದು ಹೇಳಿದ, ಆಗ ಅವನಿಗೆ ತಾನು ಮಾಡಿದ್ದು ಮುಂದೆ ಅನುಭವಿಸಬೇಕಾಗಿ ಬಂತು. ಹೀಗೆ ನಾವು ಒಬ್ಬರಿಗೆ ಒಳ್ಳೆಯದನ್ನು ಮಾಡಿದರೆ ಮತ್ತೊಬ್ಬರು ನಮಗೆ ಒಳ್ಳೆಯದನ್ನು ಮಾಡುತ್ತಾರೆ.ರೈತ ಹೊಲದಲ್ಲಿ ದುಡಿದರೆ ಅವನು ವರ್ಷವಿಡಿ ಆರಾಮಾಗಿ ಜೀವನ ಸಾಗಿಸಬಹುದು. ಸಹೋದರರಿಗೆ ದ್ರೋಹ ಮಾಡಿದ ದುರ್ಯೋಧನನು ಕೊನೆಗೆ ನಾಶ ಹೊಂದಿದನು. ಹೀಗೆ ನಾವು ಮಾಡಿದ ಕಾರ್ಯಗಳಿಂದಲೇ ನಮಗೆ ಸುಖ ದು:ಖ ದೊರೆಯುತ್ತವೆ ಎಂಬದೇ ಈ ಮಾತಿನ ತಾತ್ಪರ್ಯ.

**೬.ಕೂಡಿಬಾಳಿದರೆ ಸ್ವರ್ಗ ಸುಖ.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ನಾವು ನಮ್ಮವರು ತಮ್ಮವರು ಎಂಬ ಮನೋಭಾವನೆಯಿಂದ ಕೂಡಿ ಅರ್ಥಮಾಡಿಕೊಂಡು ಜೀವನ ಸಾಗಿಸಿದರೆ ಅಲ್ಲಿ ಸಂತೋಷದ ಸಂಭ್ರಮವೇ ಇರುತ್ತದೆ.ಒಂದು ಅವಿಭಕ್ತ ಕುಟುಂಬದಲ್ಲಿ ಒಗ್ಗಟ್ಟಿನಿಂದ ಅರ್ಥ ಮಾಡಿಕೊಂಡು ಬದುಕಿದರೆ ಅಲ್ಲಿ ಎಲ್ಲ ರೀತಿಯ ಸುಖ, ಸಂತೋಷ, ಮಮತೆ, ಪ್ರೀತಿ, ವಾತ್ಸಲ್ಯ ಸಿಗುತ್ತದೆ. ಮಲಗುವಾಗ ಅಜ್ಜ ಅಜ್ಜಿಯ ನೀತಿ ಕತೆಗಳು, ಬೇಸರವಾದಾಗ ಸಾಂತ್ವನದ ನುಡಿಗಳು, ಏನಾದರೂ ಕಾರ್ಯಕ್ರಮಗಳನ್ನು ಮಾಡಿದರೆ ಅಲ್ಲಿಯ ಸಂಭ್ರಮಕ್ಕೆ ಮಿತಿಯೇ ಇರುವುದಿಲ್ಲ.ಇವೆಲ್ಲವುಗಳನ್ನು
ನೋಡಿದಾಗ ಅಲ್ಲಿ ಸ್ವರ್ಗವೇ ಧರೆಗಿಳಿದಂತಾಗುತ್ತದೆ.

ನಾವು ಸುತ್ತ ಮುತ್ತಲಿನವರ ಜೊತೆಗೆ ಬೆರೆತು ಕೂಡಿ ಬಾಳಿದರೆ ಎಲ್ಲರಿಂದಲೂ ನಮಗೆ ಸಂತೋಷ ಸಿಗುತ್ತದೆ. ಆ ಸಂತೋಷವೇ ಸ್ವರ್ಗ ನಾವು ಶಾಲೆಯಲ್ಲಿ ಗೆಳೆಯರು ಕೂಡಿಕೊಂಡು ಪರಸ್ಪರ ವಿಶ್ವಾಸದಿಂದ ಇದ್ದರೆ ಅದೇ ನಮಗೆ ಸ್ವರ್ಗ, ಉದಾ: ಕೂಡಿ ಬಾಳುವ ಇರುವೆಗಳ ಜೀವನ ನೋಡಬಹುದು, ಜೇನುಹುಳಗಳ ಜೀವನ ನೋಡಿದಾಗ ನಮಗೆ ಇದರ ಮಹತ್ವದ ಅರಿವಾಗುತ್ತದೆ. ಒಗ್ಗಟ್ಟಿನಿಂದ ಬದುಕಿ ಸಂತೋಷ ಪಡುತ್ತವೆ. ಆದ್ದರಿಂದ ಕೂಡಿ ಬಾಳಿದರೆ ಅದರಲ್ಲಿ ಸ್ವರ್ಗದಲ್ಲಿರುವ ಸಂತೋಷವೇ ಇರುತ್ತದೆ,

**೭.ಕಟ್ಟುವುದು ಕಠಿಣ; ಕಡಹುವುದು ಸುಲಭ.**

**ಗಾದೆ ವೇದಗಳಿಗೆ ಸಮಾನ. ಅವು ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬ ಗಾದೆಯಂತೆ ಕಟ್ಟುವುದು ಕಠಿಣ; ಕೆಡಿಸುವುದು ಸುಲಭ ಎಂಬ ಮಾತು ಸತ್ಯ. ಹಲವಾರು ವರ್ಷ ಕಷ್ಟಪಟ್ಟು ದುಡಿದು ಉಳಿಸಿದ ಹಣವನ್ನು ಕೆಲವೇ ದಿನಗಳಲ್ಲಿ ಖರ್ಚು ಮಾಡಬಹುದು. ಸಸಿವೊಂದನ್ನು ಹಲವು ವರ್ಷಗಳ ಕಾಲ ಸಾಕಿ ಬೆಳೆಸುತ್ತೇವೆ. ವರ್ಷಗಟ್ಟಲೆ ಕಷ್ಟಪಟ್ಟು ಬೆಳೆಸಿದ ಮರಗಳನ್ನು ಒಂದು ನಿಮಿಷದಲ್ಲಿ ಕಡಿದು ಉರುಳಿಸಬಹುದು.ಕುಂಬಾರನು ಒಂದು ಗಡಿಗೆಯನ್ನು ಮಾಡಬೇಕಾದರೆ ಅನೇಕ ರೀತಿಯ ಕಷ್ಟ ಪಡಬೇಕಾಗತ್ತದೆ.ಅದನ್ನು ಒಡೆಯಲು ಕೇವಲ ಒಂದೇ ದೊಣ್ಣೆ ಪೆಟ್ಟು ಸಾಕು, ಮನುಷ್ಯನ ದುರ್ನಡತೆ ಸಾಕುಕೆಟ್ಟವನೆನಿಸಿಕೊಳ್ಳಲು. ಆದರೇಂದ ಒಳ್ಳೆಯ ವ್ಯಕ್ತಿ ಎನಿಸಿಕೊಳ್ಳಲು ಅನೇಕ ವರ್ಷಗಳು ಅವನು ಸನ್ನಡತೆಯಿಂದ ಇರಬೇಕು.ದುಷನೆನಿಸಿಕೊಳ್ಳಲು ಒಂದು ನಿಮಿಷ ಸಾಕು. ಆದ್ದರಿಂದ ನಾವು ಯಾವಾಗಲೂ ಸರಿಯಾದ ವಿಚಾರ ಮಾಡಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಂಡು ಹಿಂದೆ ಸಂಪಾದಿಸಿದ ಒಳ್ಳೆಯತನವನ್ನು ಕಾಪಾಡಿಕೊಂಡು ಜಗತ್ತಿನಲ್ಲಿ ಬಾಳನ್ನು ಸಾಗಿಸಬೇಕು.

**೮. ಹೆತ್ತ ತಾಯಿ : ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

"ಮನೆಯೇ ಮೊದಲ ಪಾಠ ಶಾಲೆ ಜನನಿ ತಾನೇ ಮೊದಲ ಗುರು, ಜನನಿಯಿಂದ ಪಾಠ ಕಲಿತ ಜನರೇ ಧನ್ಯರು" ಎಂಬಂತೆ ತಾಯಿಗಿಂತ ಮಿಗಿಲಾದ ದೇವರಿಲ್ಲ. ಮಗುವಿಗೆ ತಾಯಿಯೇ ಸರ್ವಸ್ವ.ತಾಯಿ ಇದ್ದರೆ ತವರು ಹೆಚ್ಚು ಎನ್ನುವ ಮಾತು ನಿಜ. ನಮ್ಮನ್ನು, ಹೊತ್ತು, ಹೆತ್ತು, ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ. ಏಕೆಂದರೆ ತಾಯಿ ತನ್ನ ಸುಖವನ್ನು ಮರೆತು ಮಕ್ಕಳ ಲಾಲನೆ ಪಾಲನೆ ಮಾಡುತ್ತಾಳೆ.ಆದ್ದರಿಂದಲೇ ಅವಳನ್ನು ಮಾತೃ ದೇವೋಭವ ಎನ್ನುವರು.

"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಎನ್ನುವ ಸಂಸ್ಕೃತ ಉಕ್ತಿಯಂತೆ ತಾಯಿಯ ಮಡಿಲು,ನಾವು ಹುಟ್ಟಿದ ಭೂಮಿ ಎರಡು ಸ್ವರ್ಗಕ್ಕೆ ಸಮಾನ. ಮೊದಲು ತಾಯಿಯ ಆಶ್ರಯ ಬೇಕು. ತಾಯಿಯಂತೆ ಎಲ್ಲವನ್ನು ದೊರಕಿಸಿ ಕೊಡುವವಳು

ಭೂಮಿತಾಯಿ. ಆ ನೆಲದಲ್ಲಿ ಆಡುತ್ತೇವೆ, ಅಗಿಯುತ್ತೇವೆ, ಬೆಳೆಯನ್ನು ಬೆಳೆಯುತ್ತವೆ, ಬೆಳೆದಿದ್ದನ್ನು ತಿಂದು ಬದುಕುತ್ತೇವೆ. ತಾಯಿಯಂತೆ ನಮ್ಮ ನಾಡು ನಮ್ಮನ್ನು ಪೋಷಿಸುತ್ತದೆ. ಆದ್ದರಿಂದ ನಮ್ಮ ನಾಡಿನ ಸಲುವಾಗಿ ಅನೇಕ ವೀರಯೋಧರು ಪ್ರಾಣತ್ಯಾಗ ಮಾಡಿದ್ದಾರೆ.ನಮ್ಮ ನಾಡಿನ ಬಗ್ಗೆ ಗೌರವ ಹೊಂದಿರಬೇಕು.ಜನ್ಮ ಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೇ ಅವರ ಹಿರಿಮೆಯನ್ನು ಎತ್ತಿಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ.ನಮ್ಮ ನೆಲ, ಜಲ, ಆಹಾರ, ಆಚಾರ, ವಿಚಾರಗಳು ನಮಗಾಗಿ ಎನ್ನವುದರ ದೃಷ್ಟಿಯಿಂದ ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು.

**೯. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ. ಗಾದೆ ವೇದಗಳಿಗೆ ಸಮಾನ.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.**

ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಸತ್ಯ ಸದಾ ಜೀವಂತವಾದದು.ಸುಳ್ಳು ಎಂದೂ ಸುಖವನ್ನು ಕೊಡಲಾರದು ಎನ್ನವುದು.ಈ ಗಾದೆಯ ಅರ್ಥ.ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಚನದಲ್ಲಿ (ಅಶೋಕ ಚಕ್ರ) ಸತ್ಯಮೇವ ಜಯತೇಎಂಬ ಬರಹ ------------ರಾರಾಜಿಸುತ್ತದೆ.ಸತ್ಯಮೇವ ಜಯತೆ ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ.ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು.ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು.ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೇಳಿರಿ ಎಂಬ ನೀತಿ ವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ.

ಸುಳ್ಳಿಗೆ ಸುಖವಿಲ್ಲ, ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ, ಸುಳ್ಳ ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯ ತನ್ನ ಗೌರವ ಅಂತಸ್ತು, ನಂಬಿಕೆ ಕಳೆದುಕೊಳ್ಳುವುದರ ಜೊತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳುಮಾಡಿಕೊಳ್ಳಬೇಕಾಗುತ್ತದೆ.

ಸುಳ್ಳು ಒಂದು ಬಲೆ ಇದ್ದಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ದಾಸರಾಗಿ ಜೀವನವನ್ನು ಹಾಳು ಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳ ಬೇಕು. ಸತ್ಯವೇ ಬೆಳಕು, ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

**೧೦. ಆಳಾಗಬಲ್ಲವನು ; ಅರಸಾಗಬಲ್ಲನು.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ.ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.** ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು.ಗಾದೆಗಳುವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ, ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ನಾವು ಮಾಡುವ ಕೆಲಸ ಸಣ್ಣದಾಗಿರಲಿ ದೊಡ್ಡದಾಗಿರಲಿ ನಿಷ್ಠೆಯಿಂದ ಕಾರ್ಯ ಮಾಡಿದಾಗ ಯಶಸ್ಸು ಸಾಧಿಸಲು ಸಾಧ್ಯ.ಕಾಯಕದ ಘನತೆಯನ್ನು ಬಡವರು ಶ್ರೀಮಂತರು ಎನ್ನದೆ ತಿಳಿದುಕೊಳ್ಳಬೇಕು.ಯಾವನು ನಿಷ್ಠೆಯಿಂದ ದುಡಿದು ತಾನು ಮಾಡುವ ಕಾರ್ಯ ಶ್ರೇಷ್ಠವಾದುದು ಎಂದು ದುಡಿಯುತ್ತಾನೋ ಅವನು ಮುಂದೆ ಅರಸನ ಹಾಗೆ.ಕುಳಿತು ಸಂತೋಷಪಡಲು ಸಾಧ್ಯವಾಗುತ್ತದೆ.ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತು ಅರಿತು ದುಡಿಯಬೇಕು. ಉದಾ: ವಿಜಯ ಸಂಕೇಶ್ವರರು ಕೇವಲ ಒಂದು ವಾಹನದ ಚಾಲಕನಾಗಿದ್ದವರು ಕಷ್ಟಪಟ್ಟು ಕಾರ್ಯ ಮಾಡಿದ್ದರಿಂದ ಇವತ್ತು ಸಾವಿರಾರು ವಾಹನಗಳ ಮಾಲಿಕರಾಗಿದ್ದಾರೆ. ನಾನು ಸಣ್ಣ ಸಣ್ಣ ಕೆಲಸ ಮಾಡಿದರೆ ಘನತೆ ಕಡಿಮೆ ಆಗುತ್ತದೆ ಎಂದು ತಿಳಿದುಕೊಳ್ಳಬಾರದು.ತಾನು ಮಾಡುವ ಕಾರ್ಯದಲ್ಲಿ ಸ್ವರ್ಗ ಸುಖವನ್ನು ಅನುಭವಿಸುವ ಗುಣ ಹೊಂದಿರಬೇಕು. ಆದ್ದರಿಂದ ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಅನೇಕ ಉದಾಹರಣೆಗಳಿವೆ. ಆಳಿನ ಜೊತೆಗೂಡಿ ದುಡಿದಾಗ ಮಾತ್ರ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹರಿಸಲು ಸಾಧ್ಯ.ಆವಾಗ ಆಳಿನ ಒಡೆಯನಾಗಲು ಸಾಧ್ಯ.ಆದ್ದರಿಂದ ಕಷ್ಟಪಟ್ಟು ದುಡಿದರೆ ಇಷ್ಟಪಟ್ಟ ಸಾಧನೆಯ ಕೀರ್ತಿ ಸಿಗುತ್ತದೆ ಎಂಬುದುನ್ನು ಈ ಗಾದೆ ತಿಳಿಸಿಕೊಡುತ್ತದೆ.

**೧೧. ಮಾತೇ ಮುತ್ತು : ಮಾತೇ ಮೃತ್ಯು.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು.**

ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು.ಎಂಬಂತೆ ಮಾತು ಮಹತ್ವಪೂರ್ಣವಾಗಿದೆ.ಮಾತು ಎಲ್ಲರಿಗೆ ಒಳ್ಳೆಯದಾದರೆ ಮುತ್ತಿನಷ್ಟು ಬೆಲೆ ಸಿಗುತ್ತದೆ.ಮಾತು ಹಿಡಿತ ತಪ್ಪಿದರೆ ಅದು, ನಮ್ಮ ಮೃತ್ಯುವಿಗೆ ಕಾರಣವಾಗುತ್ತದೆ.ಆದ್ದರಿಂದ ನಮ್ಮ ಮಾತು ಹಿತವಾಗಿರಬೇಕು.ಮಾತೇ ಮಾಣಿಕ್ಯ ನುಡಿದರೆ ಮುತ್ತಿನ ಹಾರದಂತೆ ಮಾಣಿಕ್ಯದ ದೀಪ್ತಿಯಂತೆಇರಬೇಕೆಂದು ಬಸವಣ್ಣನವರು ಹೇಳಿದ್ದಾರೆ.ಸರಳ ಸಹಜ ಸತ್ವಪೂರ್ಣವಾದ ಮಾತುಗಳಿಂದ ಮಾತನಾಡಿದವನು ಎಲ್ಲಿಯೂ ಬದುಕುತ್ತಾನೆ.

ಮಾತು ಬಲ್ಲವನಿಗೆ ಜಗಳವಿಲ್ಲ : ಊಟಬಲ್ಲವಿಗೆ ರೋಗವಿಲ್ಲ, ಆದ್ದರಿಂದ ಕೆಟ್ಟ ಮಾತುಗಳಿಂದ ಮತ್ಸರ ಉಂಟಾಗಿ ಜಗಳಕ್ಕೆ ಕಾರಣವಾಗಿ ನಮ್ಮ ಜೀವಕ್ಕೆ ಕುತ್ತಾಗುತ್ತದೆ. ಮಾತು ಅರಿತವ ಮಾಣಿಕ್ಯ ತಂದರೆ, ಮಾತು ಅರಿಯದವ ಜಗಳ ತರುತ್ತಾನೆ. ಎನ್ನುವ ಹಾಗೆ ನಾವು ಮಾತುಗಳನ್ನು ಅರಿತು ಮುಂದಾಲೋಚನೆ ಮಾಡಿಕೊಂಡು ದುಡಕದೇ ಮಾತನಾಡಬೇಕುಆಗುನ್ನತ ಸ್ಥಾನ ಸೇರಲುಸಾಧ್ಯ ಎಂಬುದೇ ಈ ಗಾದೆಮಾತಿನ ಸ್ವಾರಸ್ಯ.

**೧೨. ಹಾಸಿಗೆ ಇದ್ದಷ್ಟು ಕಾಲು ಚಾಚು.**

**ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ.** ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು.ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ.ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ನಾವು ಮಲಗುವಾಗ. ಹಾಸಿಗೆ ಇದಷ್ಟು ಕಾಲು ಚಾಚಿದರೆ ಯಾವುದು ಸಮಸ್ಯೆ ಉಂಟಾಗುವುದಿಲ್ಲ. ಹಾಸಿಗೆ ಬಿಟ್ಟು ಚಾಚಿದರೆ ನೋವು ಅನುಭವಿಸಬೇಕಾಗುತ್ತದೆ. ಅದೇ ರೀತಿಯಾಗಿ ನಮ್ಮ ಸಂಪಾದನೆಗಿಂತ ನಮ್ಮ ಖರ್ಚು ಹೆಚ್ಚಾಗಬಾರದು.ಖರ್ಚು ಹೆಚ್ಚಾದರೆ ಹಣದ ಕೊರತೆಯಾಗಿ, ಸಾಲ ಮಾಡುವದು, ಸಾಲ ಹೆಚ್ಚಾದಂತೆ ಸಾಲತೀರಸಲಿಕ್ಕೆ ಆಗದೇ, ಮಾನಸಿಕವಾಗಿ ತೊಂದರೆಗೆ ಒಳಗಾಗಿ ಸಾವು ನೋವುಗಳೂ ಉಂಟಾಗುತ್ತವೆ. ಆದ್ದರಿಂದ ನಾವು ಗಳಿಸುವ ಸಂಪಾದನೆಯನ್ನು ನೋಡಿಕೊಂಡು ಖರ್ಚು ಮಾಡಿಕೊಂಡು, ಗೌರವಯುತವಾಗಿ ಬಾಳಿದರೆ ಅದೇ ಜೀವನದಲ್ಲಿ ತೃಪ್ತಿ ತರುತ್ತದೆ.ಇದು ನಮ್ಮ ಆರ್ಥಿಕ ನಿರ್ವಹಣೆ ಹೇಗಿರಬೇಕೆಂದು ತಿಳಿಸುತ್ತದೆ.ಆದ್ದರಿಂದ ನಮ್ಮಲ್ಲಿರುವ ಸಂಪತ್ತಿನಲ್ಲಿಯೇ ಖರ್ಚು ಮಾಡುತ್ತಾ ಸುಖ ಸಂತೋಷ ಅನುಭವಿಸಬೇಕು ಎಂಬುದೇ ಈ ಗಾದೆ ಮಾತಿನ ಅರ್ಥ.

## ಅಲಂಕಾರಗಳು.

### 1) ಉಪಮಾಲಂಕಾರ.

ಲಕ್ಷಣ :ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರವೆನಿಸುತ್ತದೆ, ಉದಾ:

1)ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು".(2019 ಮಾರ್ಚ)

2) "ಮರವೇರಿದ ಮರ್ಕಟನಂತೆ".

3) "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ".

4) "ಒಳಗಿನ ಮಂದಿ ಗುಂಡು ಹೊಡಿದರೋ ಮುಂಗಾರಿ ಸಿಡಿಲ ಸಿಡಿದ್ವಾಂಗ".

5) "ಸಿಡಿಲು ಸಿಡಿದ್ಧಾಂಗ ಗುಂಡು ಸುರಿದಾವ".

### 2)ರೂಪಕಾಲಂಕಾರ

ಲಕ್ಷಣ :ಅತಿ ಸಾಮ್ಯದಿಂದಾಗಿ ಉಪಮೇಯ– ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ರೂಪಕಾಲಂಕಾರವಾಗುತ್ತದೆ.

ಉದಾ 1) ಅಳ್ಳಿರಿಯುತಿಪ್ಪ ಎಮ್ಮಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.

2) ಮಾರಿಗೌತಣವಾಯ್ತು ನಾಳಿನ ಭಾರತವು.

3) ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ.

4) ಮನೆಯಧರ್ಮಾಶ್ರಮ.

5) ಸೀತೆಯ ಮುಖ ಕಮಲ ಅರಳಿತು.

6) ಶೋಕದುಲ್ಕೆ

7) ವದನಾರವಿಂದ.

8) ಪ್ರೀತಿಯ ಹಣತೆ.

### 3) ದೃಷ್ಟಾಂತಾಲಂಕಾರ.

ಲಕ್ಷಣ:ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ತೋರಿಬಂದರೆ ಅದನ್ನು ದೃಷ್ಟಾಂತಾಲಂಕಾರ' ಎನ್ನುವರು.

ಉದಾ 1) ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.(2019 ಮಾರ್ಚ)

### 4)ಉತ್ಪ್ರೇಕ್ಷಾಲಂಕಾರ.

ಲಕ್ಷಣ : ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ.

ಉದಾ 1) ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನ ಗನ್ನಡಿಯೋ ಎಂಬಂತೆ ಶೋಭಿಸಿತು.

ಅಲಂಕಾರ: ಉಪ್ಪೇಕ್ಷಾಲಂಕಾರ.

ಉಪಮೇಯ: ಅಚ್ಛೋದ ಸರೋವರ

ಉಪಮಾನ: ರನ್ನಗನ್ನಡಿ

ಸಮನ್ವಯ: ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉಪ್ಪೇಕ್ಷಾಲಂಕಾರವಾಗಿದೆ.

**5) ಶ್ಲೇಷಾಲಂಕಾರ,**

ಲಕ್ಷಣ : ಒಂದು ಪದವುಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ ಶೇಷಪದ ಎಂದು ಹೆಸರು. ಇಂತಹ ಶೇಷ್ಲಾರ್ಥವನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು ಶ್ಲೇಷಾಲಂಕಾರ ಎಂದು ಕರೆಯುತ್ತಾರೆ.

ಉದಾ 1) ಅತಿಶಯ ಪದಾರ್ಥ ನಿಕರ
ಪ್ರತೀತಿಯಂ ಪಡೆವ ಪಾದವಿನ್ಯಾಸಂ ಭೂ
ನುತಮಾಗದಲೆನಿರ್ದೆ ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ
ಪದ–ಕವಿಯ ಪರವಾಗಿ–ರವಿಯ ಪರವಾಗಿ

1)ಪದಾರ್ಥ–ಪದದ ಅರ್ಥ (ಶಬ್ದಾರ್ಥ)–ವಸ್ತು
2)ಪಾದ–ಪದ್ಯದ ಸಾಲು–ಕಿರಣ
3)ನಿರ್ದೋಷತೆ–ದೋಷವಿಲ್ಲದಿರುವಿಕೆ–ಕಾಲಿಲ್ಲದಿರುವಿಕೆ (ಹಗಲು)

**6)ಅರ್ಥಾಂತರನ್ಯಾಸಾಲಂಕಾರ.**

ಲಕ್ಷಣ: ಒಂದು ವಿಶೇಷ ವಾಕ್ಯದಿಂದ ಸಾಮಾನ್ಯ ವಾಕ್ಯವನ್ನು ಅಥವಾ ಸಾಮಾನ್ಯ ವಾಕ್ಯದಿಂದ ವಿಶೇಷ ವಾಕ್ಯವನ್ನು ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರವಾಗಿದೆ.

ಉದಾ!) ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

2)ಜಲನಿಧಿಜಲಮಂ ಜಲಭ್ಯ
ತುಲಕ್ಕೆ ನಲಿದಿತ್ತುದತ್ತಮಿತ್ರನದೀನಿ
ರ್ಮಲ ಸಲಿಲಂ ದೊರೆದುದುಗಡ
ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ.

ಸೂಚನೆ : 1) ಅಲಂಕಾರ ವಾಕ್ಯದಲ್ಲಿ ಅಂತೆ, ಹಾಂಗ, ವೋಲ್ ಬಂದರೆ ಅದು ಉಪಮಾಲಂಕಾರವಾಗಿರುತ್ತದೆ. ಇಲ್ಲದಿದ್ದರೆ ರೂಪಕಾಲಂಕಾರವಾಗಿರುತ್ತದೆ.

2) ಅಲಂಕಾರ ವಾಕ್ಯದಲ್ಲಿ ಎಂಬಂತೆ, ಎನ್ನುವಂತೆ ಪದಗಳು ಬಂದರೆ ಅದು ಉತ್ಪೇಕ್ಷಾಲಂಕಾರವಾಗಿರುತ್ತದೆ.

3) ಸಾಮಾನ್ಯವಾಗಿ ಅಲಂಕಾರ ವಾಕ್ಯದಲ್ಲಿ ಗಾದೆ ಮಾತುಗಳು ಬಂದರೆ ಅದು ದೃಷ್ಟಾಂತಾಲಂಕಾರವಾಗಿರುತ್ತದೆ.

## ಛಂದಸ್ಸು (ಪ್ರಸ್ತಾರ)

ಪರೀಕ್ಷೆಯಲ್ಲಿ 1 ಸಾಲು ಕೊಟ್ಟರೇ ಅದು ಅಕ್ಷರ ಗಣವೆಂದು ವೃತ್ತಗಳಿಗೆ ಸಂಬಂಧಿಸದೆಂದು ತಿಳಿಯಬೇಕು.

2 ಸಾಲು ನೀಡಿದರೇ ಒಂದು ಚಿಕ್ಕ ಸಾಲು ಒಂದು ದೊಡ್ಡ ಸಾಲಿದ್ದರೇ ಅದನ್ನು ಕಂದ ಪದ್ಯವೆಂದು ತಿಳಿಯಬೇಕು.

2 ಸಾಲು ಸಮನಾಗಿದ್ದರೆ ರಗಳೆ ಎಂದು ತಿಳಿಯಬೇಕು.

3 ಸಾಲಿದ್ದರೇ ಷಟ್ಪದಿ ಎಂದು ತಿಳಿಯಬೇಕು. ಇಲ್ಲಿ 1,2 ಸಾಲು ಸಮನಾಗಿದ್ದು 3 ನೇ ಸಾಲು 1 1/2 ಪಟ್ಟು ಇರುತ್ತದೆ.

.––––––––––––––––––– = ವೃತ್ತಗಳು

.–––––––––––
.––––––––––––––––––– = ಕಂದ ಪದ್ಯ

.–––––––––
.––––––––– = ಷಟ್ಪದಿ
.––––––––––––––

# ಪತ್ರಲೇಖನ

ಮಾದರಿ: 1 (ವ್ಯವಹಾರಿಕ ಪತ್ರ)

೪೪. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ **‘ಕೌಶಿಕ್’** ಎಂದು ಭಾವಿಸಿಕೊಂಡು ಮೈಸೂರಿನ ಮೃಗಾಲಯದ ವೀಕ್ಷಣೆಗೆ ಸಮಯಾವಕಾಶ ಕೋರಿ ಅಲ್ಲಿನ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ.

**ಇವರಿಂದ,**

ಕೌಶಿಕ್, ದಿನಾಂಕ : ೨೫-೧-೨೦೨೨
ಹತ್ತನೇ ತರಗತಿ, ಸ್ಥಳ : ಶಿವಮೊಗ್ಗ
ಸರ್ಕಾರಿ ಪ್ರೌಢಶಾಲೆ,
ಶಿವಮೊಗ್ಗ

**ಇವರಿಗೆ,**

ಮಾನ್ಯ ವ್ಯವಸ್ಥಾಪಕರು,
ಮೃಗಾಲಯ
ಮೈಸೂರು
**ಮಾನ್ಯರೇ,**
**ವಿಷಯ** : ಮೃಗಾಲಯದ ವೀಕ್ಷಣೆಗೆ ಸಮಯಾವಕಾಶ ಕೋರಿ ಮನವಿ ಸಲ್ಲಿಸುವ ಬಗ್ಗೆ.

ಕೌಶಿಕ್, ಆದ ನಾನು ಸರ್ಕಾರಿ ಪ್ರೌಢಶಾಶಾಲೆ ಶಿವಮೊಗ್ಗ ಇಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ೫೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ದಿನಾಂಕ ೧೦/೦೨/೨೦೨೨ ರಂದುಮೈಸೂರುನಗರದಲ್ಲಿನಪ್ರೇಕ್ಷಣೀಯ ಸ್ಥಳಗಳನ್ನು ನೋಡುವಉದ್ದೇಶದಿಂದ ಶೈಕ್ಷಣಿಕ ಪ್ರವಾಸ ಕೈಗೊಂಡಿರುತ್ತೇವೆ. ಸದರಿ ದಿನದಂದು ಚಾಮರಾಜೇಂದ್ರ ಮೃಗಾಲಯವನ್ನು ವೀಕ್ಷಿಸಲು ಭೇಟಿನೀಡುವಉದ್ದೇಶವನ್ನು ಹೊಂದಿದ್ದೇವೆ, ಆದ್ದರಿಂದ ತಾವುಗಳು ನಮಗೆ ಮೈಗಾಲಯವನ್ನು ವೀಕ್ಷಿಸಲು ಸಮಯಾವಕಾಶ ಮಾಡಿಕೊಟ್ಟು ಸಹಕರಿಸಬೇಕೆಂದು ಕೋರುತ್ತೇನೆ.

ಧನ್ಯವಾದಗಳೊಂದಿಗೆ

ಸ್ಥಳ : ನಿಮ್ಮ ವಿಶ್ವಾಸಿ

ದಿನಾಂಕ : (ಕೌಶಿಕ್)

ಹೊರ ವಿಳಾಸ
ಇವರಿಗೆ
ಮಾನ್ಯ ವ್ಯವಸ್ಥಾಪಕರು,
ಮೃಗಾಲಯ, ಮೈಸೂರು

ಮಾದರಿ: ೨ (ವ್ಯವಹಾರಿಕ ಪತ್ರ)

ಇಂದ;

XYZ

-------

-------

ಇವರಿಗೆ;

ABC

-------------

---------

ಮಾನ್ಯರೇ,

ವಿಷಯ: -----------------------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ----------------------------------------------
----------------------------------------------------------------------
----------------------------------------------------------------------
----------------------

ವಂದನೆಗಳೊಂದಿಗೆ

ಸ್ಥಳ: ಇಂತಿ ನಿಮ್ಮ ವಿಧೇಯ/ವಿಶ್ವಾಸಿ

ದಿನಾಂಕ: XYZ

<u>ವೈಯಕ್ತಿಕ ಪತ್ರ</u>

**ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸಕ್ಕೆ ನೀವು ಹೋಗಲು 2000 ರೂ ಹಣ ಕಳಿಸುವಂತೆ ನಿಮ್ಮ ತಂದೆಗೊಂದು ಪತ್ರ ಬರೆಯಿರಿ.**

**ಕ್ಷೇಮ** **ಶ್ರೀ** **ಇಂದ**

**ನಂದಿನಿ**
**10ನೇ ತರಗತಿ,**
**ಸರ್ಕಾರಿ ಪ್ರೌಢಶಾಲೆ, ತುಮಕೂರು**
**ದಿನಾಂಕ : 10–12–2020**

**ತೀರ್ಥರೂಪುರವರಿಗೆ,**

ನಿಮ್ಮ ಮಗಳಾದ ನಂದಿನಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು, ನಾನು ಆರೋಗ್ಯದಿಂದ ಇದ್ದೇನೆ, ನೀವು ಆರೋಗ್ಯದಿಂದ ಇದ್ದೀರಿ ಎಂದು ಭಾವಿಸದ್ದೇನೆ.

ಈ ಪತ್ರ ಬರೆದ ಉದ್ದೇಶವೇನೆಂದರೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಾನು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ. ನಾನು ಈ ವರ್ಷ ಶೇ.98 ರಷ್ಟು ಅಂಕಗಳನ್ನು ಗಳಿಸಲು ಪ್ರಯತ್ನಿಸುತಿದ್ದೇನೆ ನಮ್ಮ ಶಾಲೆಯಲ್ಲಿ ಈ ವರ್ಷ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದಾರೆ ಅದಕ್ಕೆ ರೂ.2000 ನಿಗಧಿಪಡಿಸಿದ್ದಾರೆ. ನಾನು ಪ್ರವಾಸಕ್ಕೆ ಹೋಗಲು ಬಯಸುತ್ತೇನೆ ಆದ್ದರಿಂದ ನೀವು ನನಗೆ ಹಣ ಕಳಿಸಬೇಕೆಂದು ಕೋರುತ್ತೇನೆ. ಮಾತೃಶ್ರೀ ಯವರಿಗೆ ನನ್ನ ನಮಸ್ಕಾರಗಳು ಮತ್ತು ಚಿರಂಜೀವಿ ತಮ್ಮನಿಗೆ ನನ್ನ ಆಶೀರ್ವಾದಗಳನ್ನು ತಿಳಿಸಿ.

**ನಮಸ್ಕಾರಗಳೊಂದಿಗೆ**

ಇತಿ ನಿಮ್ಮ ಪ್ರೀತಿಯ
ನಂದಿನಿ

**ಹೊರವಿಳಾಸ,**
**ಇವರಿಗೆ,**
**ಚಂದ್ರಕಾಂತ**
**ತಿಲಕ್ ಬಡಾವಣೆ**
**ಬೆಂಗಳೂರು**

ಪ್ರಬಂಧಗಳು

## 1.ಗ್ರಂಥಾಲಯಗಳ ಮಹತ್ವ :

**ಪೀಠಿಕೆ:**

ಗಂಥಗಳಿಲ್ಲದ ಕೋಗೆ ಆತ್ಮವಿಲ್ಲದ ದೇಹವಿದ್ದಂತೆ ನಾಣ್ಣುಡಿಯಂತೆ ಪ್ರತಿಯೊಬ್ಬರೂ ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನಾಭಿವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾಗಿ ಗ್ರಂಥಗಳಿರುವ ಆಲಯವೇ ಗಂಥ ರು. ಅದಕ್ಕೆಂದೇ ಶಾಲಾ–ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲಟ್ಟಿವೆ.

ಮಾನವನ ಜೀವನದಲ್ಲಿ ಈ ಪ್ರಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯನ ದೇಹಕ್ಕೆ ಅನ್ನ, ನೀರು, ಗಾಳಿ ಈ ಮಹಿ ವೋ ಹಾಗೆಯೇ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮತ್ತದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯು ಮತ್ತು ಶಾಲಾ–ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳ ಅಂದರೆ ಸಾಹಿತ್ಯ ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಗ್ರಂಥಾಲಯಗಳು ಜ್ಞಾನದ ನಿಧಿಗಳಿದ್ದಂತೆ. ಅಂತಹ ಜ್ಞಾನನಿಧಿಗೆ ಕೈಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಓದುವ ಹವ್ಯಾಸವುಳ್ಳವರು ಗ್ರಂಥಾಲಯಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿ ಗಿಂತಲೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳುವುದು ಅದಕ್ಕೆಂದೇ. ಇ–ಲೈಬ್ರರಿಗಳನ್ನು ತೆರೆಯಲಾಗಿದೆ. ಎಲ್ಲಾ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತದೆ.

ಉಪಸಂಹಾರ :

ಒಟ್ಟಾರೆಯಾಗಿ ಜೀವನದ ನಿಜವಾದ ಮೌಲ, ಮತ್ತು ಸಾರ್ಥಕತೆಯನ್ನು ತಿಳಿಸಿಕೊಡುವಲ್ಲಿ, ಜೀವನದ ಬಗೆಗೆ ಭರವಸೆಯನ್ನು ತುಂಬುವಲ್ಲಿ ಮತ್ತು ಚಾರಿತ್ರ ವನ್ನು ನಿರ್ವಹಿಸುವಲ್ಲಿ ಪುಸ್ತಕಗಳ ಪಾತ್ರ ಹಿರಿದು. ಹುಸ್ತಕಗಳನ್ನೊಳಗೊಂಡ ಗ್ರಂಥಾಲಯ ಸದ್ಬಳಕೆಯಿಂದ ಸ್ವಯಂ ವ್ಯಕ್ತಿತ್ವ ವಿಕಾಶ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳ ಉತ್ತಮ ನಿರ್ವಹಣೆ ಸಾಧ್ಯವಾಗುತ್ತದೆ. ಆದ್ದರಿಂದ ಗ್ರಂಥಾಲಯಗಳನ್ನು ಅಭಿವೃದ್ಧಿಡಿಸಿ ಕಾಲಕಾಲಕ್ಕೆ ಅದನ್ನು ವಾಸ್ತವಿಕ ನೆಲೆಗಟ್ಟಿಗೆ ತಕ್ಕಂತೆ ಎಸ್ಕತಗೊಳಿಸುವುದು ನಮ್ಮ ಕರ್ತವ್ಯವಾಗಬೇಕು.